# ಅಪರಂಜಿ

ಡಿಸೆಂಬರ್ 2000

ತಿಳಿನಗೆಯ ಕಾರಂಜಿ



ಪ್ರಕಾಶ್

ಬಿ.ಎಸ್. ಪ್ರಭಾಕರ್

ಡಾ|| ವೆಂಕಟರಮಣ

ಎಂ.ಎಸ್.ಕೆ.

ಮಾಲಾ

ಕು.ಗೋ.

ಅರುಣಾ ಆರ್. ಕಾರಂತ

ಬೇಲೂರು ರಾಮಮೂರ್ತಿ

ರಾಮಿ

ಬಿಡಿ ಪ್ರತಿ: ರೂ. 5.00



ಗೌರವ ಸಲಹೆಗಾರರು:
ಶ್ರೀ ಅ. ರಾ. ಸೇ.
ಶ್ರೀ ಶೇಷಗಿರಿ
ಸಂಪಾದಕ:
ಶಿವಕುಮಾರ್
ನಿರ್ವಹಣೆ:
ಬೇಲೂರು ರಾಮಮೂರ್ತಿ
ಕೃಷ್ಣ ಸುಬ್ಬರಾವ್

ಚಂದಾ ವಿವರ:
ಬಿಡಿ ಪ್ರತಿ: ರೂ. 5.00
ವಾರ್ಷಿಕ ಚಂದಾ: ರೂ. 60
ಹತ್ತು ವರ್ಷದ ಚಂದಾ : ರೂ. 500
Ph: 3345259
email: aparanji@hotmail.com
website: aparanjimag.com

ವಿಳಾಸ : ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯ ರಸ್ತೆ, ಮಲ್ಲೇಶ್ವರಂ, ಬೆಂಗಳೂರು- 560 003 (ಕೆಲಸದ ವೇಳೆ: ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ)

## ಈ ಸಂಚಿಕೆಯಲ್ಲಿ

ಸಂಪುಟ 18 ಡಿಸೆಂಬರ್- 2000 ಸಂಚಿಕೆ - 3



ಮುದ್ರಣ: ಇಂಪ್ರೆಶನ್ಸ್, ಬೆಂಗಳೂರು - 3 ಅಕ್ಷರ ಜೋಡಣೆ: ಒಮೇಗಾ ಲೇಸರ್ ಟೆಕ್, ಬೆಂಗಳೂರು 27




೦ ಪ್ರಕಾಶ್

ಕ್ರಿಕೆಟ್ ಮೋಸದಾಟದ ಹಗರಣ

\- ಸುದ್ದಿ

**ಬೇಲ್‌ಗಳೇ ಎದ್ದು ಪಿಚ್ ಮೇಯ್ದಂತೆ!!**

★★★

ಕಂಪ್ಯೂಟರ್ ಮಾರುತ್ತಿದ್ದ ಕಳ್ಳನ ಬಂಧನ

\- ಸುದ್ದಿ

**web ನಲ್ಲಿ ಸಿಕ್ಕಿ ಹಾಕಿಕೊಂಡಿರಬೇಕು!!**

★★★

ಪತ್ರಿಕಾ ಸಂಪಾದಕರ ಮನೆಯಲ್ಲಿ ಚಿನ್ನಾಭರಣ, ನಗದು ಕಳವು

\- ಸುದ್ದಿ

**ಅಪರಂಜಿ ಸಂಪಾದಕರು ಚಕಿತರಾದರಂತೆ!!**

★★★

ಬೆಂಗಳೂರಿಗೆ ವಿಶ್ವಬ್ಯಾಂಕ್ ಪ್ರೆಸಿಡೆಂಟ್ ಆಗಮನ

\- ಸುದ್ದಿ

**ಸರ್ವಜ್ಞ ಪೇಚಾಡಿದನಂತೆ!!**

★★★

ವಿದ್ಯುತ್ ಶುಲ್ಕ ಬಾಕಿ; ಸಂಪರ್ಕ ಕಡಿತಗೊಳಿಸುವ ಬೆದರಿಕೆ

- ಪತ್ರಿಕೆ

**ಕಡಿತಗೊಳಿಸುವ ಮುನ್ನ ನಮಗೆ ಫೋನ್ ಮಾಡಿ ತಿಳಿಸಿದರೆ ಅನುಕೂಲ!!**

★★★

ತಾಜ್‌ಮಹಲ್ ಅದೃಶ್ಯವಾಗುವಂತೆ ಮಾಡಿದ ಪಿ.ಸಿ. ಸರ್ಕಾರ್!!

- ಸುದ್ದಿ

**ನಮ್ಮ ವರಮಾನ ತೆರಿಗೆ ಫೈಲ್‌ಗಳನ್ನೂ ಮಾಡುತ್ತಾರೋ??**

★★★

ಚುನಾವಣೆ ತರಬೇತಿಗಾಗಿ ಅಮೆರಿಕಕ್ಕೆ ಭಾರತದ ಎಂ.ಎಲ್.ಎ. ಗಳನ್ನು ಕಳಿಸುತ್ತಾರಂತೆ!!!

★★★

ಮುಂದಿನ ಒಲಿಂಪಿಕ್ಸ್‌ಗೆ ಭಾರತದ ತಂಡ ಹಿರಿಯರನ್ನೇ ಕಳಿಸುತ್ತದಂತೆ!!!

★★★



"ನೀ ಕಾಡ್ನಾಗೆ ಇಂಗಾಸ್ ಬಾರ್ಲಾ, ನಾ ಅಂಗಾಸ್ ಬತ್ತೀನಿ. ಅವನು ಅದೆಂಗೆ ತಪ್ಪಿಸ್ಕೊಂತಾನೆ ನೋಡೇಬಿಡಾವಾ"

## ನಮ್ಮ ನಿಮ್ಮಲ್ಲಿ

ಹಾಸ್ಯೋತ್ಸವ ಹತ್ತಿರ ಬರುತ್ತಿದ್ದಂತೆ ಅಪರಂಜಿ ಬಳಗದಲ್ಲಿ ಚಟುವಟಿಕೆ, ಸಂಭ್ರಮದ ಓಡಾಟ ಕಂಡುಬರುತ್ತಿದೆ. ನಮ್ಮ ಬಳಗದ ಸದಸ್ಯರು ಜಾಹಿರಾತಿಗಾಗಿ, ಬ್ಯಾನರ್‌ಗಳಿಗಾಗಿ ನಿಮ್ಮ ಬಳಿ ಬಂದರೆ, ಉದಾರ ಮನಸ್ಸಿನಿಂದ ಸಹಾಯ ಮಾಡಿ. ನಿಮ್ಮಗಳೆಲ್ಲರ ಪ್ರೋತ್ಸಾಹ, ಒತ್ತಾಸೆಗಳೇ ನಮ್ಮ ಶಕ್ತಿಯ ಸೆಲೆ.

ಇದೀಗ ಅಪರಂಜಿ ಇಂಟರ್ನೆಟ್‌ನಲ್ಲಿ ಮಿಂಚಲಾರಂಭಿಸಿದ್ದಾಳೆ. aparanjimag.com ಅನ್ನುವ ವೆಬ್‌ಸೈಟನ್ನು ಅಗತ್ಯವಾಗಿ ಸಂದರ್ಶಿಸಿ. ಸದ್ಯಕ್ಕೆ ಈ ವೆಬ್ ಸೈಟಿನಲ್ಲಿ, ಅಪರಂಜಿ ಕಿಡಿ, ಒಂದು ಹೊಸ ಲೇಖನ, ಕೊರವಂಜಿಯಿಂದ ಆಯ್ದ ಒಂದು ಬರಹ ಇವುಗಳನ್ನು ನೀಡುತ್ತಿದ್ದೇವೆ. ಸೈಟನ್ನು ಉತ್ತಮ ಪಡಿಸಲು ನಿಮ್ಮ ಸಲಹೆಗಳೇನಾದರೂ ಇದ್ದರೆ ಖಂಡಿತ ತಿಳಿಸಿ. ಸಂಪರ್ಕ ವಿಳಾಸ ಸೈಟಿನಲ್ಲೇ ಇದೆ. ಅಂದಹಾಗೆ, ನಮ್ಮ ಸೈಟನ್ನು ವಿವಿಧ ಸರ್ಚ್ ಇಂಜಿನ್ನುಗಳಿಗೆ ನೋಂದಾಯಿಸುವ ಯೋಜನೆಯಿದೆ. ಈ ಬಗ್ಗೆ ಹೆಚ್ಚು ಮಾಹಿತಿ ಇರುವ ಓದುಗರು ದಯವಿಟ್ಟು ನಮ್ಮ ನೆರವಿಗೆ ಬನ್ನಿರೆಂದು ಕೋರಿಕೆ.

ಅಪರಂಜಿಯ ಡಿ.ಟಿ.ಪಿ. ಕೆಲಸವನ್ನು ಒಮೇಗಾದ ರವಿ ಮಾಡುತ್ತಿದ್ದಾರೆ. ಮುದ್ರಣ ಎಂದಿನಂತೆ ನಾಥ್‌ರವರ baby. ಮೊನ್ನೆ ರವಿಯೊಂದಿಗೆ ಮಾತನಾಡುತ್ತಿದ್ದಾ "ಡಿ.ಟಿ.ಪಿ. ಬಿಲ್ಲುಗಳಿಗೆ ನಾಥ್‌ರಿಂದ ಸಕಾಲಕ್ಕೆ ಪೇಮೆಂಟ್ ಸಿಗುತ್ತಿದೆ ತಾನೇ" ಅಂತ ಕೇಳಿದೆ. ಅದಕ್ಕೆ ರವಿ, "ಅದರದ್ದೇನೂ ತೊಂದರೆಯಿಲ್ಲ. ಹೇಗಿದ್ದರೂ ನಮ್ಮದು ಹಾಲಿನ ಚೀಟಿಯ ಸಮಾಚಾರ" ಅಂದರು. ನನಗೆನೆ ಅರ್ಥವಾಗಲಿಲ್ಲ. "ಹಾಗೆಂದರೇನು?" ಅಂತ ಕೇಳಿದೆ.

ರವಿ ಹೇಳಿದರು "ಒಬ್ಬ ಹಾಲಿನವನು ಮತ್ತು ಒಬ್ಬ ಮುದ್ರಣಕಾರ ಅಕ್ಕಪಕ್ಕದ ಮನೆಯಲ್ಲಿದ್ದರಂತೆ. ಹಾಲಿನವನು ಬಹಳ ಶಿಸ್ತಿನ ಆಸಾಮಿ. ತಾನು ಹಾಲು ಹುಯ್ಯುವ ಮನೆಗಳಿಗೆಲ್ಲಾ ತಿಂಗಳ ಮೊದಲನೆಯ ದಿನವೇ ಒಂದು ಹಾಲಿನ ಚೀಟಿಯ ಪುಸ್ತಕಗಳನ್ನು ಕೊಟ್ಟು, ಪ್ರತಿದಿನ ಹಾಲು ಹುಯ್ಯುವಾಗ ಒಂದೊಂದಾಗಿ ಚೀಟಿ ಹಿಂದಕ್ಕೆ ಪಡೆಯುತ್ತಿದ್ದ. ಚೀಟಿಯ ಮುದ್ರಣದ ಭಾರ ಸಹಜವಾಗಿಯೇ ಪಕ್ಕದ ಮನೆಯವನಿಗೆ ಬಿತ್ತು. ಮುದ್ರಕನಾದರೂ ಅವನಿಗೂ ಹಾಲು ಬೇಡವೇ. ಸರಿ, ಅವನು ಹಾಲು ಹುಯ್ಯುವುದು, ಇವನು ಚೀಟಿ ಮುದ್ರಿಸಿ ಕೊಡುವುದು ಈ ಕೆಲಸಗಳು ಸತತವಾಗಿ ನಡೆದಿತ್ತು. ಹಲವು ತಿಂಗಳುಗಳಾದ ಮೇಲೆ ಇಬ್ಬರೂ ಲೆಕ್ಕ ಸರಿದೂಗಿಸಲು ಕುಳಿತರು. "ಎರಡನೇ ತಿಂಗಳ ಮಧ್ಯೆ ಮೂರು ದಿನ ಅರ್ಧ ಲೀಟರ್ ಹಾಲು ತೆಗೆದುಕೊಂಡಿದ್ದೆ" ಅಂತ ಒಬ್ಬ ಹೇಳಿದರೆ, ಇನ್ನೊಬ್ಬ "ಚೀಟಿಗಳ ಸ್ಟಾಕ್ ಇದ್ದುದರಿಂದ ಒಮ್ಮೆ ಒಂದು ಬುಕ್ಕನ್ನೇ ತೆಗೆದುಕೊಂಡಿರಲಿಲ್ಲ" ಅಂತ ಉತ್ತರಿಸುತ್ತಿದ್ದ. ಕೊನೆಗೆ ಈ ಎಲ್ಲ ತ್ರಾಪತ್ರಯ ಯಾಕೆ ಅಂತ ಯಾವ ಲೆಕ್ಕಾಚಾರದ ಗೊಡವೆಗೂ ಹೋಗದೇ, ನಿರಂತರವಾಗಿ ಹಾಲು ಹುಯ್ಯುವುದು, ಚೀಟಿ ಮುದ್ರಿಸುವುದು ಅಂತ ಇಬ್ಬರೂ ಒಂದು ಒಪ್ಪಂದಕ್ಕೆ ಬಂದರು.

"ನನ್ನ ಮತ್ತು ನಾಥ್ ವ್ಯವಹಾರ ಹೆಚ್ಚುಕಡಿಮೆ ಆ ರೀತಿ" ಎಂದರು ರವಿ. ಕ್ಯಾಷ್‌ಲೆಸ್ ಬಿಸಿನೆಸ್ ಅಂತ ಎಲ್ಲೋ ಓದಿದ್ದೆ. ಅದರ ಪ್ರತ್ಯಕ್ಷ ನಿದರ್ಶನ ಇಲ್ಲಿ ದೊರೆಯಿತು. ರಾ.ಶಿ.ಯವರ "ಇಂದಾನೊಂದು ಕಾಲದಲ್ಲಿ" ಪುಸ್ತಕದಿಂದ ಆಯ್ದ ಲೇಖನಗಳನ್ನು ಸಂಗ್ರಹಿಸಿ ಒಂದು ಪುಸ್ತಕ ಹೊರತಂದು ಹಾಸ್ಯೋತ್ಸವದಲ್ಲಿ ಮಾರಾಟಕ್ಕೆ ಇಡುತ್ತಿದ್ದೇವೆ. ನಗೆ ರಸಿಕರು ಕೊಂಡು ಓದಲು ಮುಂದಾಗಬೇಕು ಎಂದು ಕಳಕಳಿಯ ಮನವಿ.

**– ಶಿವಕುಮಾರ್**

# ಸ್ಕೂಲ್ ಪ್ರೇಯರ್ಸ್ ಹೀಗೂ ಇರುತ್ವೇ

– ಬಿ.ಎಸ್. ಪ್ರಭಾಕರ್

ನನ್ನ ಮೊಮ್ಮಕ್ಕಳನ್ನು ನೋಡಿ ಬಹಳಷ್ಟು ದಿನಗಳೇ ಆಗಿತ್ತು. ಅವರನ್ನು ನೋಡಬೇಕೆಂಬ ಹೆಬ್ಬಯಕೆಯಿಂದ ಮುನ್ಸೂಚನೆ ಕೊಡದೆ, ಬೆಳಗ್ಗೆ ಒಂಬತ್ತಕ್ಕೆಲ್ಲಾ ಮಗನ ಮನೆಯನ್ನು ತಲುಪಿದ್ದೆ. ಆದರೆ ಅಷ್ಟರಲ್ಲೇ ನನ್ನ ಮಗ ಫ್ಯಾಕ್ಟರಿಗೆ ಹೊರಟುಹೋಗಿದ್ದ.

ಮೊಮ್ಮಕ್ಕಳು ಸ್ಕೂಲ್ ಯೂನಿಫಾರಂ ಧರಿಸಿ, ಬೆನ್ನಿಗೆ ಪುಸ್ತಕಗಳ ಬ್ಯಾಗನ್ನು ಸೇರಿಸಿಕೊಂಡು ಸ್ಕೂಲ್ಗೆ ಹೊರಡಲು ಸಿದ್ಧವಾಗುತ್ತಿದ್ದರು.

ನನ್ನ ಸೊಸೆ, ಲಾವಣ್ಯ, ನನ್ನ ಅನಿರೀಕ್ಷಿತ ಆಗಮನದಿಂದ ಕೊಂಚ ಆಶ್ಚರ್ಯಗೊಂಡು ''ಇದೇನ್ಮಾವ, ಇದ್ದಕ್ಕಿದ್ದಂತೆ ದಿಡೀರಂತ ಪ್ರತ್ಯಕ್ಷ ಆಗ್ಬಿಟ್ರಿ? ಬರೋರು ಬಂದ್ರಿ, ಅತ್ತೇನೂ ಜೊತೇಲಿ ಕರ್ಕೊಂಡು ಬರ್ಬಾರ್ದಾಗಿತ್ತ? ಅವ್ರನ್ನ ನೋಡಿ ಎಷ್ಟೋ ದಿನಗಳಾಯ್ತು. ನಿನ್ನೆ ರಾತ್ರಿ ತಾನೇ ಅತ್ತೇನ, ಅದ್ಯಾಕೋ ಏನೋ ತುಂಬ್‌ತುಂಬಾನೆ ಜ್ಞಾಪಿಸ್ಕೊಂಡ್ವಿ ಮಾವ'' ಅಂತ ಲೋಕಾಭಿರಾಮವಾಗಿ ವಿಚಾರಿಸಿದಳು.

ನಾನು ಲಾವಣ್ಯಳಿಗೆ ಏನೋ ಹೇಳಬೇಕೆಂದಿದ್ದೆ. ಅಷ್ಟರಲ್ಲಿ ನನ್ನ ಆರು ವರುಷದ ಮೊಮ್ಮಗಳು ಮಾನಸ ''ಹೌದು ತಾತ, ರಾತ್ರಿ ಊಟ ಮಾಡೋವಾಗ ಅಜ್ಜೀನ, ಮಮ್ಮಿ ತುಂಬಾನೆ ಜ್ಞಾಪಿಸ್ಕೊಂಡ್ಳು, ತಾತಾ, ಅಜ್ಜೀನ ಹಿಡಂಬಿ ಅಂತ ಕರೆದ್ಲು. ಹಿಡಂಬಿ ಅಂದ್ರೇನು ತಾತ?'' ಅಂತ ಮುದ್ದುಮುದ್ದಾಗಿ ಕೇಳಿದಳು.

ನಾನು ನಗುವನ್ನು ಕಷ್ಟದಿಂದ ನುಂಗಿಕೊಂಡೆ.

ಲಾವಣ್ಯಳ ಮುಖ ಕೋಪದಿಂದ ಧುಮುಗುಟ್ಟಿತು. ''ಅಯ್ಯೋ ಅಯ್ಯೋ ಪಾಪಿಷ್ಟೆ ಸುಳ್ಳೆಲ್ಲಾ ಹೇಳ್ತೀಯ? ಸಂಜೆಗೆ ಡ್ಯಾಡಿ ಬರ್ಲಿ ನಿಂಗೆ ಪೂಜೆ ಮಾಡಿಸ್ತೀನಿ'' ಅಂತ ಕೂಗಾಡಿ ಆನಂತರ ನನ್ನ ಕಡೆಗೆ ತಿರುಗಿ ''ಮಾವ, ದೇವ್ರಾಣೆಗೂ ಅತ್ತೇನ ಹಿಡಂಬಿ ಅಂತ ಕರೀಲಿಲ್ಲ'' ಅಂತ ಸಮರ್ಥಿಸಿಕೊಂಡಳು.

ನಾನು ''ಒಂದ್ವೇಳೆ, ಹಿಡಂಬಿ ಅಂತ ನಿನ್ನ ಅತ್ತೇನ ನೀನು ಕರ್ದಿದ್ರೂ, ನಾನೇನು ತಪ್ಪು ತಿಳ್ಕೊಳೊಲ್ಲ. ಹೆದರ್ಕೊಬೇಡ, ಬಿಡು'' ಅಂತ ಹೇಳ್ಬೇಕು ಅಂತಿದ್ದೆ, ಆದರೆ ಅಷ್ಟರಲ್ಲಿ ನನ್ನ ಮೊಮ್ಮಗ ದರ್ಶನ್ ''ಮಮ್ಮೀ, ನೀನೇ ಸುಳ್ಳು

ಹೇಳ್ತಿರೋದು. ಪಾಪ, ಮಾನಸ ಸುಳ್ಳು ಹೇಳ್ತಾ ಇಲ್ಲ. ನೀನು 'ಅಜ್ಜೀಗೆ ಬ್ರೈನ್ ಇಲ್ಲ, ತಲೇ ತುಂಬಾ ಜೇಡಿ ಮಣ್ಣೇ ಇರೋದು' ಅಂತ ಅಂದ್ಯಲ್ಲ, ಅದು ಪರ್ವಾಗಿಲ್ವಾ?'' ಅಂತ ಅಂದುಬಿಟ್ಟ.

ಲಾವಣ್ಯಳಿಗೆ ಕೋಪ ನೆತ್ತಿಗೇರಿತು. ''ಅಯ್ಯೋ ಅಯೋಗ್ಯ ಮುಂಡೇದೇ' ಮಾಡ್ತೀನಿ ಇರು'' ಅಂತ ಹೇಳಿ ಕೈ ಎತ್ತಿಕೊಂಡು ಮುಂದೆ ನುಗ್ಗಿದಳು, ದರ್ಶನ್ನಿಗೆ ಥಳಿಸಲು.

ದರ್ಶನ್ ಓಡಿಬಂದು ''ತಾತ.. ತಾತ, ಮಮ್ಮಿ ಹೊಡೀತಾಳೆ ನೋಡ್ತಾತ'' ಅಂತ ಹೇಳುತ್ತಾ ನನ್ನ ಹಿಂದೆ ಅವಿತುಕೊಂಡು ''ಈಗ ಹೊಡೀ ಬಾ ನೋಡೋಣ'' ಅಂತ ಅವನ ಅಮ್ಮನನ್ನು ಕೆಣಕಿದ.

ನಾನು ಲಾವಣ್ಯಳನ್ನು ''ಬಿಡಮ್ಮಾ, ಮಕ್ಳ ಮಾತು, ಮಂತ್ರಿಗಳ ಮಾತು ಎರ್ಡೂ ಒಂದೇ, ಯಾರೂ ಅವನ್ನ ಸೀರಿಯಸ್ಸಾಗಿ ತಗೋಬಾರ್ದು'' ಅಂತ ಸಮಾಧಾನ ಪಡಿಸಿ, ಮಕ್ಕಳಿಬ್ಬರಿಗೂ ನಾ ತಂದಿದ್ದ ಚಾಕ್ಲೇಟನ್ನು ಕೊಟ್ಟು ''ಸ್ಕೂಲ್ಗೆ ಹ್ಯಾಗೆ ಹೋಗ್ತೀರ ಮಕ್ಳೇ?'' ಅಂತ ಮುಖ್ಯವಲ್ಲದ ಪ್ರಶ್ನೆ ಕೇಳಿ ''ಹಿಡಂಬಿ, ಜೇಡಿಮಣ್ಣು'' ಇತ್ಯಾದಿ ಪದಗಳಿಂದಾದ ವಾತಾವರಣವನ್ನು ತಿಳಿಯಾಗಿಸಿದೆ.

''ಮನೆ ಮುಂದೆನೇ ಬಸ್ ಬರುತ್ತೆ ತಾತ'' ಅಂತ ದರ್ಶನ್ ಉತ್ತರಿಸಿದ.

''ಇಬ್ರಿಂದ ಬಸ್ ಒಂದಕ್ಕೇ ತಿಂಗ್ಳಿಗೆ ಹತ್ತತ್ರ ಸಾವ್ರ ಖರ್ಚಾಗುತ್ತೆ ಮಾವ'' ಕ್ಷಣಗಳ ಹಿಂದೆ ನಡೆದ ಕಹಿ ಪ್ರಸಂಗವನ್ನು ಮರೆತು ಹೆಮ್ಮೆಯಿಂದ ವರದಿ ಒಪ್ಪಿಸಿದಳು ಲಾವಣ್ಯ.

''ಕ್ಲಾಸಸ್ ಶುರುವಾಗೋಕೆ ಮುಂಚೆ ಪ್ರೇಯರ್ಸ್ ಮಾಡಿಸ್ತಾರಾ?'' ಕಡ್ಡಾಯವಾಗಿ ಮಾಡೇ ಮಾಡಿಸ್ತಾರೆ ಅಂತ ಗೊತ್ತಿದ್ರೂ, ಪೆದ್‌ಪೆದ್ದಾಗಿ ಬೇಕೆಂದೆ ಗುಗ್ಗು ತರ ಕೇಳಿದೆ.

ಮಕ್ಕಳು ಉತ್ತರಿಸುವುದಕ್ಕೆ ಮುಂಚೆನೇ ಲಾವಣ್ಯ ಮನಸ್ಸನ್ನು ಹಗುರ ಮಾಡಿಕೊಂಡು ''ಹೌದು ಮಾವ, ದಿನಾ ಎಲ್ಲಾರ್ಗು ನಂ ಮಕ್ಳೆ ಪ್ರೇಯರ್ಸ್ ಹೇಳ್ಕೊಡೋದು. ಇಬ್ರಿಗೂ ಪ್ರೈಸ್ ಬಂದಿದೆ. ತುಂಬಾ ಚೆನ್ನಾಗಿ ಹೇಳ್ತಾರೆ. ಇಬ್ರ ಗಂಟ್ಲೂ ಏನ್ ಚೆನ್ನಾಗಿದೆ ಅಂದ್ರೇ ಅಷ್ಟು ಚೆನ್ನಾಗಿದೆ.'' ಅಂತ ಮಕ್ಕಳ ಬಗ್ಗೆ ಹೆಮ್ಮೆಯಿಂದ ಹೊಗಳಿಕೆಯ ಮಾತುಗಳನ್ನಾಡಿದಳು.

''ವೆರಿಗುಡ್, ಏನೇನು ಪ್ರೇಯರ್ಸ್ ಮಾಡಿಸ್ತೀರಾ ಮಕ್ಳೇ'' ಅಂತ ಮುಂದಿನ ಪ್ರಶ್ನೆ ಕೇಳಿದೆ.

ಮಕ್ಕಳಿಬ್ರೂ ಒಬ್ಬರ ಮುಖವನ್ನು ಒಬ್ಬರು ನೋಡಿಕೊಂಡು ಗುಟ್ಟುಗುಟ್ಟಾಗಿ ಏನೇನೋ ಮಾತಾಡಿಕೊಂಡವು. ಆನಂತರ ವರಾಂಡಕ್ಕೆ ಹೋಗಿ ಕೆಲವು ಕ್ಷಣಗಳಲ್ಲಿ ಹಿಂತಿರುಗಿ ಬಂದವು.

ದರ್ಶನ್ ನನ್ನ ಹತ್ತಿರ ಬಂದು ''ತಾತ, ಡೈಯ್ಲಿ ಒಂದೊಂದು ಪ್ರೇಯರ್ ಹೇಳ್ಕೊಡ್ತೀವಿ. ಅದು ಯಾವ್ದು ಅಂತ ಹೇಳಿದ್ರೆ ಕೋಪ ಮಾಡ್ಕೊಳ್ಬಾರ್ದು'' ಅಂತ ಅಂದ.

''ಛೇ, ಛೇ, ಪ್ರಾಮಿಸ್, ನಾನು ಕೋಪ ಮಾಡ್ಕೊಳ್ಳೊದೆ ಇಲ್ಲ. ನೀವಿಬ್ರೂ ಬಂಗಾರ್ದಂತ ಮಕ್ಳು. ನಿಂ ಮೇಲೇ ಕೋಪ ಮಾಡ್ಕೊಂಡ್ರೆ ದೇವ್ರು ನನ್ಮೇಲೇ ಕೋಪ ಮಾಡ್ಕೊಳ್ತಾನೆ. ನಿಮ್ಗೆ ಹ್ಯಾಗೆ ಬರುತ್ತೋ ಹಾಗೇ ಹೇಳಿ'' ಅಂತ ಹುರಿದುಂಬಿಸಿದೆ. ನನ್ನ ಅಂದಾಜಲ್ಲಿ ಪ್ರೇಯರ್ಸ್ ಅಂದ್ರೇ ''ಗುರುರ್ಬ್ರಹ್ಮಾ ಗುರುರ್ವಿಷ್ಣುಃ'' ಇತ್ಯಾದಿ ಸ್ತೋತ್ರಗಳಿರಬಹುದು ಅಂತ ಅಂದುಕೊಂಡಿದ್ದೆ.

''ಯಾವ ಪ್ರೇಯರ್ಸ್ ಹೇಳ್ತೀರ ಅಂತ ಹೇಳಿದ್ರೆ, ತಾತ ಕೋಪ ಯಾಕೆ ಮಾಡ್ಕೊಳ್ತಾರೆ? ಬಸ್ ಬರೋ ಟೈಮ್ ಆಯ್ತು ಮಕ್ಳಾ, ಬೇಗ್ಬೇಗ ಹೇಳಿ, ರೆಡಿಯಾಗಿ'' ಅಂತ ಲಾವಣ್ಯ ಸೂಚಿಸಿದಳು.

ದರ್ಶನ್ ಬೆನ್ನಮೇಲೆ ಹೇರಿಕೊಂಡಿದ್ದ ಪುಸ್ತಕದ ಹೊರೆಯನ್ನು ಕೆಳಕ್ಕೆ ಬೀಳಿಸಿ, ಮಾನಸಳ ಕಡೆಗೆ ಅರ್ಥಪೂರ್ಣವಾಗಿ ಕಿರುನೋಟ ಹರಿಸಿ, ''ಕಿಸಕ್'' ಅಂತ ನಕ್ಕು, ಆನಂತರ ಕೈಕಾಲುಗಳನ್ನು ಹಾಗೇ ಹೀಗೆ ಜಾಡಿಸಿ, ಗಂಟಲನ್ನು ಸರಿಪಡಿಸಿಕೊಂಡು, ''ಸ್ಟೈಲಿಷಾಗಿ'' ಆಕಡೆ ಈಕಡೆ ನೋಡಿ, ರಿಹರ್ಸಲ್ ಮಾಡಿದ, ತಾನೊಬ್ಬ ದೊಡ್ಡ ಕಲಾವಿದ ಎನ್ನುವಂತೆ.

ನಾನು ಹೆಚ್ಚಿನ ಆಸಕ್ತಿಯಿಂದ, ಕಣ್ಣು ಕಿವಿಗಳನ್ನು ಚುರುಕುಗೊಳಿಸಿಕೊಂಡು ನೋಡತೊಡಗಿದೆ.

''ಹ್ಞೂ ಶುರು ಮಾಡಿ, ಬಸ್ ಬರೋ ಹೊತ್ತಾಯಿತು'' ಆತುರ ಪಡಿಸಿದಳು ಲಾವಣ್ಯ.

ದರ್ಶನ್ ಥಟ್ಟನೆ ''ಅಮ್ಮಾ ನಾ ಸೇಲಾದೆ, ಅಮೆರಿಕ ಪಾಲಾದೆ'' ಅನ್ನೋ ಕನ್ನಡ ಚಲನ ಚಿತ್ರದ ಹಾಸ್ಯ ಗೀತೆಯ ತುಣುಕನ್ನು ಹಾಡಿ, ''ಇವತ್ತು ಮಂಡೆ ಅಲ್ವಾ ತಾತ, ಅದಕ್ಕೇ ಈ ಪ್ರೇಯರ್'' ಅಂತ ನಗುತ್ತಾ ಹೇಳಿದ.

ಲಾವಣ್ಯ ಕಿಡಿಕಿಡಿ ಆದಳು. ''ದರ್ಶನ್, ಸಾಕೋ ನಿನ್ ತಲೆಹರ್ಟೆ, ಮೊದ್ಲ್‌ನೇರ್ಕ್ಕೊಂದೇನೇ ಘುದ್ದಾಟ ಆಡ್ತೀಯ? ಸಂಜೆ ನಿಂಡ್ಕಾಡಿ ಬರ್ಲ್ಲಿ ಚರ್ಮ, ಚರ್ಮ ಸುಲಿಸ್ತೀನಿ'' ಅಂತ ಕೂಗಾಡಿದಳು.

''ಅಯ್ಯೋ ರಾಮ! ಮಕ್ಳು ತಮಾಷೆ ಮಾಡ್ತಾ ಇವೆ. ಅಷ್ಟಕ್ಕೇ ಯಾಕಮ್ಮ ರೇಗಾಡ್ತೀ? ಸ್ವಲ್ಪ ಸುಮ್ನಿರಮ್ಮ ಮಕ್ಳು ಹೇಳೋದನ್ನ ಕೇಳೋಣ'' ಅಂತ ಲಾವಣ್ಯಳಿಗೆ ಬುದ್ಧಿ ಹೇಳಿ ''ನಾಳೆ ಟ್ಯೂಸ್ಡೇ ಯಾವ ಪ್ರೇಯರ್ ಹೇಳ್ಕೊಡ್ತೀರಾ ಮಕ್ಳೇ'' ಅಂತ ಕೇಳಿದೆ.

ನಾ ಕೇಳಿದ್ದೇ ತಡ, ಪುಟ್ಟ ಮಾನಸ ''ದೊಡ್ಡವರೆಲ್ಲಾ ಜಾಣರಲ್ಲ, ಚಿಕ್ಕವರೆನ್ನಾ ಕೋಣರಲ್ಲ'' ಅನ್ನೋ ಚಿತ್ರ ಗೀತೆಯ ಒಂದು ಸಾಲನ್ನು ಅವಳ ವಯಸ್ಸಿಗೆ ಜಾಸ್ತಿ ಎನ್ನುವಷ್ಟು ಚೆನ್ನಾಗಿ ಹಾಡಿ ''ನಾಳೆ ಟ್ಯೂಸ್ಡೇ, ಅದಕ್ಕೇ ಈ ಪ್ರೇಯರ್ರು ತಾತ'' ಅಂತ ಮುಸಿ ಮುಸಿ ನಗುತ್ತಾ ಹೇಳಿದಳು.

ಮಾನಸ ಮಾತು ಮುಗಿಸಿದ ತಕ್ಷಣ ದರ್ಶನ್ ''ತಾತ ನಾಡಿದ್ದು ಯಾವ ಪ್ರೇಯರ್ ಅಂದ್ರೇ'' ಅಂತ ಏನೋ ಹೇಳಬೇಕೆಂದಿದ್ದ ಅಷ್ಟರಲ್ಲಿ ಹೊರಗಡೆ ಬಸ್ಸಿನ ಹಾರನ್ ಶಬ್ದ ಕೇಳಿಸಿತು. ಮಕ್ಕಳಿಬ್ಬರೂ ಬ್ಯಾಗುಗಳನ್ನು ಬೆನ್ನ ಮೇಲೆ ಏರಿಸಿಕೊಂಡು, ಟಿಫನ್ ಬ್ಯಾಸ್ಕೆಟ್ ಹಿಡಿದು, ''ಟಾಟ ತಾತ, ಟಾಟ ಮಮ್ಮೀ'' ಅಂತ ಹೇಳಿ ಬಸ್ ಹತ್ತಿ ಹೋದರು.

ಮಕ್ಕಳು ಹೋದ ಮೇಲೆ ''ಓದೋದ್ರಲ್ಲಿ ಹ್ಯಾಗಿದಾರಮ್ಮ ಮಕ್ಳು?'' ಅಂತ ಕೇಳಿದೆ ಲಾವಣ್ಯಳನ್ನ.

''ಓದೋದ್ರಲ್ಲಿ ಇಬ್ರೂ ಸ್ಕೂಲ್ಗೇ ಫಸ್ಟ್ ಮಾವ. ಅಷ್ಟೇ ಅಲ್ಲ, ಡಿಬೇಟಲ್ಲಿ, ಅಂತಾಕ್ಷರೀಲಿ, ಗೇಮ್ಸ್‌ಅಲ್ಲಿ, ಸ್ಥಳದಲ್ಲೇ ಚಿತ್ರ ಬರ್‍ಯೋದ್ರಲ್ಲಿ ಎಲ್ಲದ್ರಲೂ ಎಷ್ಟೊಂದು ಪ್ರೈಜ್ ತೆಗೊಂಡಿವೆ ಅಂತಿರಾ ಮಾವ, ಇಬ್ರೂ ಪ್ರಚಂಡ್ರು, ಆದ್ರೇ ಅಷ್ಟೇ ತಲೆ ಹರ್ಟೆ ಮಾಡ್ತಾರೆ ಮಾವ, ನೀನು ಅಂದ್ರೆ ನಿಂಮ್ಮಪ್ಪ ಅಂತಾರೆ'' ಅಂತ ಹೆಮ್ಮೆ ಮತ್ತು ಆತಂಕ ತುಂಬಿದ ಧ್ವನಿಯಲ್ಲಿ ದೂರಿದಳು.

ನಂಗೆ ಲಾವಣ್ಯಳ ಮಾತುಗಳನ್ನು ಕೇಳಿದಾಗ ಹೃದಯ ತುಂಬಿ ಬಂತು. ''ಪುಣ್ಯ ಮಾಡಿದ್ದೆ ಕಣೇ ಅಮ್ಮ ನೀನು, ಇಂತಾ ಬಂಗಾರ್ದಂತ ಮಕ್ಕಳನ್ನು ಪಡ್ಯೋಕೆ. ಬುದ್ಧಿ ಬಂದ್ಮೇಲೆ ಎಲ್ಲಾ ಸರಿಹೋಗುತ್ತೆ. ಮಕ್ಳ ಮೇಲೆ ನಿನ್ ಗಂಡನ ಹತ್ರ ದೂರ್ ಹೇಳಿ ಶಿಕ್ಷೆ ಕೊಡಿಸ್ಬೇಡ, ಗೊತ್ತಾಯ್ತಾ? ಅಂತ ಹೇಳಿ, ''ಟಿಫನ್ ಏನ್ ಮಾಡಿದ್ಯಮ್ಮ?'' ಅಂತ ಕೇಳಿದೆ.

★★★

# ನಗಲು ಕಾರಣ ಬೇಕೇ?

– ಡಾ|| ವೆಂಕಟರಮಣ

(ನಗುವುದು ಒಂದು ಕಲೆ; ಅದು ಧರ್ಮ ಕೂಡಾ. ನಗಿಸುವುದು ಇನ್ನೂ ಶ್ರೇಷ್ಠ ಕಾರ್ಯ. ಭಗವಂತ ಮನುಷ್ಯ ಪ್ರಾಣಿಗೆ ಮಾತ್ರ ನಗುವ ಸೌಲಭ್ಯವನ್ನು ನೀಡಿದ್ದಾನೆ. ಒಂದು ವರ್ಗದ ಕತ್ತೆ ಕಿರುಬ ಕೂಡಾ ತುಸುಮಟ್ಟಿಗೆ ನಗುವ ಪ್ರತಿಕ್ರಿಯೆ ತೋರಬಲ್ಲುದಂತೆ. ಆದರೆ ನಗುವ ಭಗವಂತ ಕೈಂಕರ್ಯಕ್ಕೆ ಕತ್ತೆಕಿರುಬಗಳನ್ನು ಅರಸಿಹೋಗುವುದು ಸುಲಭವಲ್ಲದ್ದರಿಂದ, ನಾವು ಮಾನವ ಪ್ರಾಣಿಗಳು ನಮ್ಮಲ್ಲೇ ನಗುವ ಪ್ರವೃತ್ತಿಯನ್ನು ಬೆಳೆಸಿಕೊಂಡು, ಇತರ ಬಂಧುಗಳನ್ನೂ ನಗಿಸುತ್ತಿದ್ದರೆ, ನಗು ಸಾಂಕ್ರಾಮಿಕವಾದ್ದರಿಂದ, ಸಂತಸದ ತೊರೆಯನ್ನು ಹರಿಸಲು, ಅದು ಬತ್ತದಂತೆ ತಡೆಯಲು ಅನುವಾಗುವುದು. ಆದ್ದರಿಂದ ಎಲ್ಲರೂ ಬನ್ನಿ, ನಗೋಣ; ನಗಿಸೋಣ. ಅನಾನುಕೂಲ ಪರಿಸರದಲ್ಲೂ ಅದನ್ನು ನಗುಮುಖದಿಂದ, ಅರಳಿದ ಮನಸ್ಸಿನಿಂದ ಹೊಂದಿಕೊಳ್ಳಲು ಸಾಧ್ಯ. ಇಂಥ ಕೆಲವು ಪ್ರಸಂಗಗಳನ್ನು ಸೂಕ್ಷ್ಮವಾಗಿ ಕೆಳಗೆ ತಿಳಿಸಿದೀನಿ. ಓದಿ ಆನಂದಪಡಿ; ಬಿಡುವಿದ್ದರೆ ನಗಾಡಿ; ಬಿಡುವಿಲ್ಲದಿದ್ದರೆ ಬಿಡುವು ಮಾಡಿಕೊಂಡು ನಗಾಡಿ. ನಗುವಿನ ಸಂದೇಶವನ್ನು ಪಸರಿಸಿ. ಇದು ಭಗವಂತನ ಒಂದು ಸೇವಾಮುಖ. ನಿಮಗೆ ಶುಭವಾಗಲಿ.)

★★★★★

ಆದಾಯಕರ ನೀಡುತ್ತಿರುವವರಿಗೆ ಇನ್ನು ಮುಂದೆ ಪಡಿತರದ ಸೌಕರ್ಯ ಇಲ್ಲವಂತ. ಅಂದರೆ ಸಕ್ಕರೆ ಸರಕಾರೀ ದರದಲ್ಲಿ ಸಿಗದು. ಇದು ಸರಿಯಲ್ಲವೆಂದು ದೂರು ನೀಡಲು ಹೋದವರಿಗೆ ಮಂತ್ರಿ ಮಹಾಶಯರು "ಹೇಗಿದ್ದರೂ ಆದಾಯ ತೆರಿಗೆದಾರರಲ್ಲಿ ಹೆಚ್ಚಿನವರಿಗೆ ಮಧುಮೇಹದ ಪ್ರೀತಿ ಇದ್ದೇ ಇರುತ್ತದೆ. ಇನ್ನು ಸಕ್ಕರೆಯ ಸಿಹಿ ಯಾಕೆ?" ಎಂದು ಪ್ರಶ್ನಿಸಿ ನಸುನಗು ಬೀರುತ್ತ ಸಕ್ಕರೆ ರಹಿತ ಚಹದ ಸತ್ಕಾರ ನೀಡಿ ಕಳುಹಿಸಿದರಂತೆ!

★★★★★

ರಾವಣನ ಅತಿಮುಖ್ಯ ಸಮಸ್ಯೆಗಳಲ್ಲಿ ಎರಡು ಕೈಗಳಿಂದ ಹತ್ತು ಮೂಗುಗಳನ್ನು ನೆಗಡಿ ಕಾಲದಲ್ಲಿ ನಿಭಾಯಿಸುವುದಾಗಿತ್ತು. ದಾದಿಯರು

ಮಹಾರಾಜನ ಮೂಗುಗಳನ್ನು ಮುಟ್ಟದಾದರು. ಸಾಂಕ್ರಾಮಿಕ ನೆಗಡಿ ಎಲ್ಲ ಮೂಗುಗಳನ್ನೂ ಏಕಕಾಲದಲ್ಲಿ ಬಾಧಿಸುತ್ತಿತ್ತು. ಮಂಡೋದರಿ ಎರಡು ನಾಸಿಕಗಳನ್ನು ತಾನು ನೋಡಿಕೊಳ್ಳುವೆನೆಂದಳು; ಹಾಳಾದ ಮೂಗು ಇನ್ನೂ ಸಾಕಷ್ಟಿದ್ದವಲ್ಲ? ದಶಗ್ರೀವ ಯೋಚನಾ ಪರವಶನಾದ. ನಿಜವಾಗಿ ಹೀಗೆ ಆತ ಸೀತೆಯ ಬಗ್ಗೆ ಲಗ್ಗೆ ಹಾಕುವಂತಾಯಿತು. ಸೀತೆಗೂ ಶೀತಕ್ಕೂ ಶಬ್ದ ಸಾಮೀಪ್ಯವಿದೆಯಲ್ಲ! ತನ್ನ ಯೋಚನೆಯನ್ನು ಲಂಕೇಶ್ವರ ಕಾರ್ಯಗತಗೊಳಿಸಿದ. ಮಹಾರಾಣಿಯರಂಥ ಸಲಿಗೆ ಇಲ್ಲದ ಯಾರೂ ಮಹಾರಾಜನ ಮೂಗನ್ನು ಮುಟ್ಟೆವೆಂದ ಕಾರಣ ರಾವಣ ಸೀತೆಗೆ ತನ್ನನ್ನು ವರಿಸೆಂದು ಸೂಚಿಸಿದ. ಆದರೆ ಜನ ಇದನ್ನು ತೀರ ತಪ್ಪಾಗಿ ತಿಳಿದರು. ಇದರಲ್ಲಿ ದಶಕಂಠನ ತಪ್ಪು ಏನೇನೂ ಇಲ್ಲ! ಮುಂದಿನ ಕತೆ ಎಲ್ಲರಿಗೂ ಗೊತ್ತಿರುವುದೇ.

★★★★★

ಅಡುಗೆ ಅನಿಲದ ಬೆಲೆಯನ್ನು ಸರಕಾರ ಯದ್ವಾತದ್ವಾ ಏರಿಸುತ್ತಿದೆ ಎಂಬ ದೂರು, ಗುಸುಗುಸುವಾಗಿ ಶುರುವಾದದ್ದು, ಈಗ ಗಂಟೆಯಾಗುತ್ತಿದೆ. ಸಿಲಿಂಡರಿಗೆ ಮೌಲ್ಯ ಇನ್ನೂರರ ಗಡಿ ದಾಟಿರುವುದು ಸಾಮಾನ್ಯವೇ? ಮಂತ್ರಿ ಮಹೋದಯರನ್ನು ತಿಂಮ ಆತ್ಮೀಯವಾಗಿ ಮಾತನಾಡಿಸುತ್ತಿದ್ದ, ಈ ಬಗ್ಗೆ. ''ನೋಡು ತಿಂಮ'' ಎಂದರು ಮಹಾಶಯರು, 'ಹಿಂದಿನ ಕಾಲದಲ್ಲಿ ಜನ ಋಷಿ ಮುನಿಗಳಂತಿದ್ದರು. ಗೆಡ್ಡೆಗೆಣಸು ತರಕಾರಿಗಳನ್ನು ಬೇಯಿಸದೆ ಹಸಿ ಹಸಿಯಾಗಿ ಬಳಸುತ್ತಿದ್ದರು. ಎಂಥ ಸಾತ್ವಿಕ ಗುಣ ಅವರದ್ದು! ಮೋಸ ವಂಚನೆಗಳಿಲ್ಲ; ಲಂಚಗುಳಿತನವಿಲ್ಲ; ಆಡಂಬರ ಡಂಭಾಚಾರಗಳಿಲ್ಲ. ಈ ಕುರಿತು ಎಷ್ಟೇ ಪ್ರವಚನಗಳನ್ನು, ಲೇಖನಗಳನ್ನು ಜಾಹೀರಾತುಗಳನ್ನು ಏರ್ಪಡಿಸಿದರೂ ಈಗಿನ ಜನ ಬದಲಾಗಲಿಲ್ಲ. ಹೀಗಾಗಿ ಅಡುಗೆ ಅನಿಲವನ್ನು ದುಬಾರಿಗೊಳಿಸಿ ಜನರ ಒಲವನ್ನು ಹಸಿ ಊಟದ ಕಡೆಗೆ ವಾಲಿಸುವ ಯತ್ನ ಸರಕಾರದ್ದು. ಇದು ಯಶಸ್ವಿಯಾಗಲೇಬೇಕು. ಆಗ ದೇಶದಲ್ಲಿ ಸುಭಿಕ್ಷ ನೆಲಸುವುದು'' ಎಂದು ಮಂತ್ರಿವರ್ಯರು ಸಾಧನೆಯ ನಗೆ ಬೀರಿದರು! ಇನ್ನು ಸಿಮೆಂಟು ಕಬ್ಬಿಣಗಳ ಬೆಲೆ ಕೂಡ ಆಕಾಶಕ್ಕೇರುವಂತೆ ಮಾಡಿದರೆ ಜನ ಪರ್ಣ ಕುಟೀರಗಳಿಗೆ ಮರಳುವುದು ಖಚಿತವೆಂದು ಯೋಚಿಸುತ್ತ ತಿಂಮ ಹೊರನಡೆದ.

★★★★★

ವಿವಾಹಗಳು ಸಿದ್ಧವಾಗುವುದು ಸ್ವರ್ಗದಲ್ಲಿ. ಇದರಲ್ಲಿ ಏನೇನೂ ಸಂದೇಹವಿಲ್ಲ. ಆದರೆ ನೆನಪಿರಲಿ, ಗುಡುಗು ಮಿಂಚುಗಳು ತಯಾರಾಗುವುದೂ ಅಲ್ಲೇ, ಮೇಲೆ ವಿಶೇಷವೆಂದರೆ ಇವೆರಡರ ಪರಿಣಾಮವೂ ಪಾಪ, ಈ ಬುವಿ ಮೇಲೆ ಅನುಭವಿಸಲ್ಪಡುತ್ತದೆ!

★★★★★

ಅಳಿಯನಾಗುವ ಯೋಗ್ಯತೆಯಿದೆಯೇ ಎಂದು ಯುವಕನೊಬ್ಬನನ್ನು ಬಿಂದು ಮಾಧವರಾಯರು ಪರೀಕ್ಷಿಸುತ್ತಿದ್ದರು. ''ಸಿಗರೇಟು ಸೇದುತ್ತೀಯಾ?'' ಉತ್ತರ ''ಇಲ್ಲ''. ''ಕುಡಿತ?'' ಇದಕ್ಕೂ ಉತ್ತರ ''ಇಲ್ಲ''. ಇದೇ ಜಾರುದಾರಿಯ ಮುಂದಿನ ಎರಡು ಮೂರು ದುಶ್ಚಟಗಳ ಕುರಿತ ಪ್ರಶ್ನೆಗೂ ಯುವಕನಿಂದ ''ಇಲ್ಲ, ಇಲ್ಲ'' ಎಂಬ ಉತ್ತರ ಬಂತು. ರಾಯರಿಗೆ ಖುಶಿಯೋ ಖುಶಿ, ಭಾವೀ ಅಳಿಯ ಸಿಕ್ಕಿದನೆಂದು. ಅಂತೂ ''ಹೇಗೂ ಇರಲಿ'' ಎಂದು ಕೊನೆಯ ಒಂದು ಪ್ರಶ್ನೆ ಕೇಳಿದರು ರಾಯರು. ''ದುಶ್ಚಟಗಳ ಕುರಿತ ಪ್ರಶ್ನೆಗಳಿಗೆಲ್ಲ ಇಲ್ಲವೆಂಬ ನಿನ್ನ ಉತ್ತರ ಕೇಳಿ ನನಗೆ ಸಂತೋಷವಾಗಿದೆ. ಈಗ ಹೇಳು, ನಿನಗೆ ದುರ್ಬಲತೆ ಏನಾದರೂ ಇದೆಯೋ?'' ಯುವಕ ಹೇಳಿದ ''ಇರುವ ದುರ್ಬಲತೆ ಒಂದೇ ಒಂದು. ಅದೆಂದರೆ, ಸುಳ್ಳು ಹೇಳುವುದು!'' ಬಿಂದು ಮಾಧವರಾಯರ ಉಲ್ಲಾಸದ ಬುಗ್ಗೆಯಲ್ಲಿ ದೊಡ್ಡ ತೂತು ಉಂಟಾಯಿತು. ದೇವರೇ ಕಾಪಾಡಬೇಕಿತ್ತು, ಅವರನ್ನು - ಮದುವೆಯೂ ನಡೆದು ಹೋಗಿದ್ದರೆ!! ಎಲ್ಲ ಬಣ್ಣವನ್ನು ಮಸಿ ನುಂಗುವುದಿಲ್ಲವೇ?

★★★★★

ಗಂಡನೊಬ್ಬ ತನ್ನ ಯಜಮಾನ್ತಿಯನ್ನು ತುಷ್ಟಿಗೊಳಿಸಲು ಯತ್ನಿಸುತ್ತಿದ್ದ. ''ಯತ್ರ ನಾರ್ಯಸ್ತು ಪೂಜ್ಯಂತೇ, ರಮಂತೇ ತತ್ರ ದೇವತಾಃ'' ಎಂದ ಮೊದಲಿಗೆ. ಎಲ್ಲಿ ಹೆಂಗಸರಿಗೆ ಗೌರವವಿದೆಯೋ ಅಲ್ಲಿ ದೇವತೆಗಳು ಖುಶಿಯಿಂದ ಇರುತ್ತಾರೆಂದು ಅರ್ಥ ವಿವರಿಸಿದ. ಬಳಿಕ, ಸಂಸ್ಕೃತದ ಮಾತು ಸಾಲದೆಂದೋ ಏನೋ, ಆಂಗ್ಲಭಾಷೆಯ "The hands that rock the cradle, rule the world" ಎಂಬುದನ್ನು ತಿಳಿಸುತ್ತ ತೊಟ್ಟಿಲು ತೂಗುವ ಕೈಗಳು, ಪ್ರಪಂಚವನ್ನು ಆಳುತ್ತವೆಂದ. ಮನೆಯ ಒಡತಿ ಆಗ ನಿಜವಾಗಿಯೂ ಚಿಕ್ಕ ಶಿಶುವನ್ನು ತೂಗುತ್ತಿದ್ದಳು. ಸೂಕ್ಷ್ಮ ಮತಿಯಾದ ಅವಳು ''ನಿಮ್ಮ ಆಂಗ್ಲ

ಮಾತನ್ನು ನಿಜವಾಗಿ ನೀವು ನಂಬುವುದಾದರೆ, ಇಂದು ನಾನು ಸಂಜೆ ಖರೀದಿಗೆ ಪೇಟೆಗೆ ಹೋಗುವಾಗ ನಿಮ್ಮ ಕೈ ಪ್ರಪಂಚವನ್ನು ಆಳುವ ಕೆಲಸ ಮಾಡಲಿ'' ಎಂದಳು!

★★★★★

ಅರ್ಜುನ ಪ್ರಶಸ್ತಿ ವಿಜೇತರಲ್ಲಿ ಕೆಲವರು ಅರ್ಜುನನ ರೀತಿ ನಿಜವಾಗಿ ವರ್ತಿಸಿಲ್ಲವೆಂಬುದು ಈಗ ಸರಕಾರದ ಗಮನಕ್ಕೆ ಖಚಿತವಾಗಿ ತಿಳಿದುಬಂದಿದೆಯಂತೆ. ಹೀಗಾಗಿ ಈ ಪ್ರಶಸ್ತಿಗಳನ್ನು ಅವರಿಂದ ವಾಪಾಸು ಪಡೆಯುವ ಕುರಿತು ಗಂಭೀರ ಸಮಾಲೋಚನೆ ನಡೆಯುತ್ತಿದೆ. ಇದರ ಬದಲು ಒಂದು ಸೂಚನೆ ಯಾರೋ ಕಳುಹಿಸಿದ್ದಾರಂತೆ. ಅಂಥವರಿಗೆ ಇನ್ನೂ ಒಂದು ಪ್ರಶಸ್ತಿ, ಶಕುನಿ ಯಾ ದುರ್ಯೋಧನರ ಹೆಸರನ್ನು ಅಂಟಿಸಿ ಯಾಕೆ ನೀಡಬಾರದು? ಹಿಂದಿನ ಎಲ್ಲ ಪ್ರಶಸ್ತಿಗಳ ಗೌರವವನ್ನು ಇದು ನುಂಗಿಬಿಡುತ್ತದಲ್ಲ! Date ಗೆ antidote!!

★★★★★



''ಮೀಸೆ ಇರ್‍ಬೋದು ಸಾರ್! ಆದ್ರೆ ತಲೆ ಬೋಡಾಗಿದೆಯಲ್ಲಾ''

# ಅಟಾಚ್ಮೆಂಟ್ಸ್

**– ಎಂ.ಎನ್.ಕೆ.**

ಮಧ್ಯಾನ ಒಳ್ಳೇ ನಿದ್ದೆ ಮಾಡ್ತಿದ್ದೆ. ಕರಗಂಟೆ ಟರ್ರ್ ಅಂತು. ಇದ್ಯಾವನಪ್ಪ ನಿದ್ರಾಕಂಠಕ ಅನ್ಕೊಂಡು ನಿದ್ದೆ ಗಣ್ಣಲ್ಲೆ ಹೋಗಿ ಬಾಗಿಲು ತೆರೆದೆ.

ಯುವಕ ಟೈ ಕಟ್ಟಿದ್ದ. ಎತ್ತರವಾಗಿದ್ದ. ಹಿ ಹಿ ಹೀ ಅಂತ ಕಾಲ್ಗೇಟ್ ad ಥರ ನಕ್ಕ. ಒಳ್ಳೇ personality. ಇಂಗ್ಲೀಷಲ್ಲಿ ಅರಳು ಹುರಿದ್ಹಾಗೆ ಪಟಪಟಾಂತ ಮಾತಾಡ್ತಿದ್ದ. "ಗುಡ್ ಆಫ್ಟರ್‌ನೂನ್ ಸರ್. ಸಾರಿ ನಿಮ್ಮ ನಿದ್ದೆ ಕೆಡಿಸಿದೆನೇನೋ. ನನಗೆ ಕೇವಲ ಹತ್ತು ನಿಮಿಷ ಮಾತ್ರಾ ಕೊಡಿ. ನನ್ನ ಹೆಸರು ಮಿ ಸೋ ಅಂಡ್ ಸೋ ನಾನು xxxx ಕಂಪೆನಿ ಕಮರ್ಷಿಯಲ್ ಎಗ್ಸಿಕುಟೀವ್" ಅಂತ ಹೇಳಿ ನನ್ನ ಕೈ ಕುಲಿಕಿ "ನಾನು ಒಳಗೆ ಬರಬಹುದೇಂತ" ಕೇಳಿಕೊಂಡೇ ಬಂದು ಕುಳಿತ ಕಣ್ಣುಜ್ಜಿಕೊಳ್ಳುತ್ತ ನಾನೂ ಕೂತೆ.

"ಸರ್ ಈ ಸೆಲ್‌ಫೋನ್ ನೋಡಿ. ಇದರಲ್ಲಿ ನಮ್ಮ ಕಂಪೆನಿಯವರು ಎಲ್ಲಾ ಅಟಾಚ್ಮೆಂಟ್ಸ್ ಇಟ್ಟಿದ್ದಾರೆ. ನೀವು ಇದನ್ನ ಸೆಲ್‌ಫೋನ್ ಆಗಿ ಉಪಯೋಗಿಸಬಹುದು. ಇದರಲ್ಲಿ ಟೈಂ ನೋಡ್ಕೋಬೋದು. ನಿಮಗೆ ಇನ್ನು ಮುಂದೆ ರಿಸ್ಟ್‌ವಾಚೇ ಬೇಡ. ಇದರಲ್ಲಿ ಅಲಾರಂ ಇದೆ. ನಿಮ್ಮ ಹಾಸಿಗೆ ಪಕ್ಕ ಅಲಾರಂ ಗಡಿಯಾರಾನೇ ಬೇಡ. ಇದರಿಂದ ನೀವು E mail ಕೂಡಾ ಕಳಿಸಬಹುದು. ನೀವ್ ವೆಬ್ ಆಕ್ಸೆಸ್ ಮಾಡಿ E ಷಾಪಿಂಗ್ ಮಾಡ್ಬೋದು ಸಿನೆಮಾ ಟಿಕೆಟ್ ಬುಕ್ ಮಾಡ್ಬೋದು. ನೀವು ಇದರಿಂದ ಫ್ಯಾಕ್ಸ್ ಕೂಡಾ ಕಳಿಸ್ಬೋದು. ಮೆಸೇಜ್ ರಿಸೀವ್ ಮಾಡ್ಬೋದು. ಇನ್ನು ಮುಂದೆ ನೀವು ನಿಮ್ಮ ಬ್ಯಾಂಕ್ ಅಕೌಂಟ್ ಆಕ್ಸೆಸ್ ಮಾಡಿ ನಿಮ್ಮ ವಾಟರ್ ಮತ್ತು ಲೈಟ್ ಬಿಲ್ ಕೂಡಾ ಕಟ್ಟಬೋದು. ನೀವು ನಿಮ್ಮ ಮನೆಯಿಂದ ಹೊರಗೆ ಹೋಗ್ಬೇಕಾದ್ದೆ ಇಲ್ಲ ಇದೊಂದಿದ್ದರೆ ನಿಮ್ಮ ಹತ್ತಿರ. ಇದರಲ್ಲಿ ಇನ್ನೂ ಒಂದು ಅಟಾಚ್ಮೆಂಟ್ ಇದೆ. ಅದು ಮಿನಿ ಟಿ.ವಿ. ನೀವು ಹೊರಗೆ ಹೋಗಿದ್ದಾಗ ಇದರಿಂದ ಕ್ರಿಕೆಟ್ ಮ್ಯಾಚೂ ನೋಡ್ಬೋದು.....

ಪಾಪ ಆ ಹುಡುಗ ಇನ್ನೂ ಏನೇನೋ ಹೇಳ್ಲಿಕ್ಕೆ ಹತ್ತಿದ್ದ. ನನಗೆ ಮತ್ತೆ ನಿದ್ದೆ ಬರ್ಲಿಕ್ಕೆ ಶುರು ಆಗಿತ್ತು. ನಾನು ಅವನನ್ನು ಏನಾದರೂ ಮಾಡಿ ಸಾಗಹಾಕಬೇಕೆಂದು "ಯಂಗ್ ಮಾನ್. ನೀನು ಹೇಳೋದೆಲ್ಲಾ ಅದ್ಭುತ. ಆದರೆ

ನಿನ್ನ ಆ ಯೂನಿಟ್ ಅಲ್ಲಿ ಒಂದು ಇಂಪಾರ್ಟೆಂಟ್ ಅಟಾಚ್ಮೆಂಟ್ ಮಿಸ್ ಆಗಿದೆ'' ಅಂದೆ.

''ಅದು ಯಾವ್ದೂ ಸಾರ್ ಮಿಸ್ ಆಗಿರೋದು. ಕೂಡ್ಲೇ ನಮ್ಮ ಕಂಪನಿಗೆ ಬರೆದು ಅದನ್ನೂ ಅಟಾಚ್ ಮಾಡಿಸ್ಬಿಡ್ತೀನಿ'' ಅಂದ ಆ ಯುವಕ.

''ಮೈ ಗುಡ್ ಫೆಲ್ಲೋ. ಅದು ಅಷ್ಟು ಈಸೀ ಅಲ್ಲ ಮಾಡೋಕೆ. ನನಗೆ ಸದ್ಯಕ್ಕೆ ಬೇಕಾದ್ದು ಅಟಾಚ್ಡ್ ಟಾಯ್ಲೆಟ್. It is Impossible in your mini cell phone. ಥ್ಯಾಂಕ್ಯೂ ಫರ್ ಕಮಿಂಗ್. ಗುಡ್‌ನೈಟ್'' ಅಂತ ಹೇಳಿ ಬಾಗಿಲನ್ನು ತೆರೆದು ಅವನ ನಿರ್ಗಮನಕ್ಕೆ ಕಾದೆ. ಆ ಹುಡುಗ ನನ್ನನ್ನು ಅರೆ ಹುಚ್ಚ ಅನ್ಕೊಂಡಿರಬೇಕು. ನನ್ನಿಂದ ಸ್ವಲ್ಪ ದೂರಾ ಇದ್ಕೊಂಡೇ ಬಾಗಿಲಿಂದ ನುಸಿಳಿಕೊಂಡು ಬಿರಬಿರನೆ ಹೊರಟೇಬಿಟ್ಟ. ಅವನು ಗೇಟ್ ದಾಟಿ ಹೋಗೋವರ್ಗೂನೂ ಬಾಗಿಲು ತೆರೆದಿದ್ದು ಆಮೇಲೆ ಮೆಲ್ಲಗೆ ಬಾಗಿಲು ಮುಚ್ಚಿ ಮತ್ತೆ ನನ್ನ ಹಾಸಿಗೆ ಹಿಡಿದೆ.



''ಹೌದು ಕಣೇ, ನಂದೇ ತಪ್ಪು, ಎಂ.ಜಿ. ರಸ್ತೇಲಿ ಬಲಗಡೆ ಫುಟ್‌ಪಾತ್‌ನಲ್ಲಿ ಹೋಗಿದ್ರೆ ಅವ್ನು ಸಿಗ್ತಾನೂ ಇರ್ಲಿಲ್ಲ. ಹಾಯ್ ಅಂತಾನೂ ಇರ್ಲಿಲ್ಲ.''

# ರಗಳೆಗಳು

– ಮಾಲಾ

ನೀವು ಹರಿಹರನ ರಗಳೆ ಎಂಬ ಹಳೆಗನ್ನಡ ಕಾವ್ಯವನ್ನು ಓದಿರುತ್ತೀರಿ. ನಾವು ನೀವು ಜೀವನದಲ್ಲಿ ದಿನನಿತ್ಯ ಅನುಭವಿಸುವ ರಗಳೆಗಳು ಎಷ್ಟೋ ಇವೆ. ಇಲ್ಲಿ ಕೆಲವು ರಗಳೆಗಳ ಪರಿಚಯ ಮಾಡುತ್ತೇನೆ. ಇಂಥ ರಗಳೆಗಳನ್ನು ಅನುಭವಿಸಿದ್ದೀರ ಎಂದು ಓದಿ ಹೇಳಿ.

ಮಧ್ಯಾಹ್ನ ಊಟ ಮುಗಿಸಿ ಮಲಗಿರುತ್ತೇನೆ. ಆಗ ಕರೆಗಂಟೆಯ ಕರ್ಕಶ ಧ್ವನಿ (ನಮ್ಮ ಮನೆಯ ಕರೆಗಂಟೆ ಕರ್ಕಶವೇ!) ಬಡಿದು ಎಬ್ಬಿಸುತ್ತದೆ. (ನಮಗೆ ಬೇಡವೆಂದು ಅನಿಸಿದಾಗ ಯಾವ ಕರೆಗಂಟೆಯಾದರೂ ಕರ್ಕಶವೇ) ಶಪಿಸುತ್ತ ಬಾಗಿಲು ತೆರೆದರೆ ಮಾರಾಟ ಪ್ರತಿನಿಧಿ 'ಗುಡ್ ಈವ್‌ನಿಂಗ್ ಮೇಡಂ' ಎಂದು ಹಲ್ಲು ಕಿರಿಯುತ್ತಾರೆ. ಅವರೆಲ್ಲರಿಗೂ ಆಂಗ್ಲವೇ ಬರುವುದು ಬಾಯಿಯಲ್ಲಿ. ಸಿಟ್ಟು ಬರುತ್ತದೆ. ಕೂಡಲೇ ಸಿಟ್ಟನ್ನು ಶಮನಗೊಳಿಸುತ್ತೇನೆ. ಅವರೂ ಹೊಟ್ಟೆಪಾಡಿಗಾಗಿ ತಾನೆ ದುಡಿಯುವುದು. ನಗುನಗುತ್ತ 'ನನಗೇನೂ ಬೇಡ' ಎನ್ನುತ್ತೇನೆ. ಅವರು 'ಥ್ಯಾಂಕ್ಯೂ ಮೇಡಂ' ಎಂದು ಪುನಃ ಹಲ್ಲು ಕಿರಿಯದೆಯೇ ನಿರ್ಗಮಿಸುತ್ತಾರೆ. ಈ ಕಿರಿಕಿರಿಯನ್ನು ದಿನಾ ನೀವೂ ಅನುಭವಿಸುತ್ತೀರಲ್ಲವೇ?

★★★

ಸ್ವಾರಸ್ಯವಾದ ಕತೆಯನ್ನೊ, ಕಾದಂಬರಿ ಅಥವಾ ಇನ್ನೇನಾದರೂ ಬೇರೆ ಪುಸ್ತಕ ಓದುತ್ತಿರುತ್ತೀರಿ. ರಾತ್ರಿಯಲ್ಲಿ ಓದಿ ಮುಗಿಸಿಯೇ ಮಲಗುವುದು ಎಂದು ನೀವಂದುಕೊಂಡರೆ 'ದೀಪ ಆರಿಸು, ದೀಪವಿದ್ದರೆ ನನಗೆ ನಿದ್ದೆ ಬರುವುದಿಲ್ಲ. ಇನ್ನು ನಾಳೆ ಓದಬಹುದು' ಎಂದು ಗಂಡನ ಪಿರಿಪಿರಿ ಆರಂಭವಾಗುತ್ತದೆ. ನೀವು ರಗಳೆ ಎನಿಸಿದರೂ ಪುಸ್ತಕ ಮುಚ್ಚಿಟ್ಟು ದೀಪ ಆರಿಸಬೇಕು.

★★★

ಹೆಂಡತಿ ಪಕ್ಕದ ಮನೆಯವಳೊಂದಿಗೆ ಮಾತನಾಡುತ್ತಿರುತ್ತಾಳೆ. ಅನಂತರ ಒಳಬಂದು 'ರ್‍ರೀ, ನೆರೆಮನೆಯಾಕೆ ಒಂದು ಸೀರೆ ಕೊಂಡಿದ್ದಾಳೆ. ಐದುನೂರು ರೂಪಾಯಿ ಬೆಲೆಬಾಳುವ ಸೀರೆ ಕಡಿತದಿಂದ ಬರೀ ಇನ್ನೂರಕ್ಕೇ ಸಿಗುತ್ತಂತೆ. ನಾನೂ ಒಂದು ತೆಗೆದುಕೊಳ್ಳಲೇ?' ಎಂಬ ಬೇಡಿಕೆ ಬರುತ್ತದೆ. ಆಗ ನೀವು ಬೇಡ ಎಂದರೆ ರಗಳೆ ತಪ್ಪಿದ್ದಲ್ಲ. ತೆಗೆಸಿಕೊಟ್ಟರೆ ಜೇಬಿಗೇ ಕತ್ತರಿ. ರಗಳೆ

ಅನುಭವಿಸುವುದಕ್ಕಿಂತ ಜೇಬಿಗೆ ಕತ್ತರಿ ಬಿದ್ದರೂ ಪರವಾಗಿಲ್ಲ ಎಂದು ನೀವು ಭಾವಿಸುತ್ತೀರಲ್ಲವೇ?

★★★

ರಾತ್ರಿ ಗಂಡ ಮಲಗಿರುತ್ತಾನೆ. ಹೆಂಡತಿ ದೀಪ ಉರಿಸಿ ಏನೋ ಮಾಡುತ್ತಿರುತ್ತಾಳೆ. 'ದೀಪ ಆರಿಸು, ತೊಂದರೆಯಾಗುತ್ತದೆ' ಎಂದು ಗಂಡನ ಸಿಡುಕು ಉತ್ತರ ಕೇಳಬೇಕಾಗುತ್ತದೆ! ಅದೇ ರೀತಿ ಹೆಂಡತಿ ಮಲಗಿರುತ್ತಾಳೆ. ಗಂಡ ರೇಡಿಯೋ ಕಿವಿ ತಿರುಗಿಸಿ ದೊಡ್ಡ ಧ್ವನಿಯಲ್ಲಿಟ್ಟು ಆಲಿಸುತ್ತ ದೀಪ ಉರಿಸಿಕೊಂಡೇ ಕುಳಿತಿರುತ್ತಾನೆ. ಆಗ ಹೆಂಡತಿಗೆ ಕಿರಿಕಿರಿಯಾದರೂ ತೆಪ್ಪಗೆ ಇರಬೇಕಾಗುವ ಮನೆಗಳೇ ಹೆಚ್ಚಿರುತ್ತದೆ!

★★★

ಗಂಡನಿಗೆ ದೈವಭಕ್ತಿಯಿದ್ದು, ಹೆಂಡತಿಗೆ ಇಲ್ಲದಿದ್ದರೆ ಪೂಜೆ ಪುನಸ್ಕಾಗಳಲ್ಲಿ ಮನಸ್ಸಿಗೆ ಕಿರಿಕಿರಿಯಾದರೂ ಮನೆಯ ಶಾಂತಿಗೋಸ್ಕರ ಸಹಕರಿಸಲೇಬೇಕಾಗುತ್ತದೆ.

★★★

ನೀವು ತಿಂಡಿ ಮಾಡಿರುತ್ತೀರಿ. ಆಗ ಪಕ್ಕದ ಮನೆಯವರು ಬಂದು ನಾಚಿಕೆ ಬಿಟ್ಟು 'ತಿಂಡಿ ಮಾಡುತ್ತಿದ್ದೀರ, ನಮಗೂ ಸ್ವಲ್ಪ ಕೊಡಿ' ಎನ್ನುತ್ತಾರೆ. ಮನಸ್ಸಿಲ್ಲದಿದ್ರೂ ದಾಕ್ಷಿಣ್ಯಕ್ಕೆ ಕಟ್ಟುಬಿದ್ದು ತಿಂಡಿ ಕೊಡುತ್ತೀರಿ. ಮನೆಗೆ ನೆಂಟರು (ತಿಳಿಸದೇ) ಬರುತ್ತಾರೆ. ಅವರು ಸೀದ ಅಡುಗೆ ಕೋಣೆಗೇ ನುಗ್ಗುತ್ತಾರೆ. ನೀವು ಇನ್ನೂ ಅಡುಗೆ ಕೋಣೆಯನ್ನು ಶುಚಿಗೊಳಿಸಿರುವುದಿಲ್ಲ. ಆಗ ನಿಮಗೆ ರಗಳೆಯಾಗುತ್ತದೆ.

★★★

ಆ ದಿನ ನೆಂಟರು ಮನೆಗೆ ಬರುತ್ತಾರೆ. ಹೆಚ್ಚಿನ ಅಡುಗೆಗಳಾಗಬೇಕು. ತುಂಬ ಒತ್ತಡದಲ್ಲಿರುತ್ತೀರಿ. ತೊಳೆಯಲು ಪಾತ್ರೆ ರಾಶಿ ಬಿದ್ದಿರುತ್ತದೆ. ಅದೇ ದಿನ ನಿಮ್ಮ ಕೆಲಸದವಳು ಚಕ್ಕರ್ ಹಾಕುತ್ತಾಳೆ. ಅನಂತರ ಅವಳು ಬಂದಾಗ ಚೆನ್ನಾಗಿ ದಬಾಯಿಸಬೇಕೆಂದುಕೊಳ್ಳುತ್ತೀರಿ. ಎರಡು ದಿನ ಬಿಟ್ಟು ಅವಳು ಬಂದು ಅನಾರೋಗ್ಯದ ಕಾರಣ ಅಥವಾ ಬೇರೆ ಸಬೂಬು ಹೇಳುವಾಗ ನಿಮ್ಮ ಕೋಪ ಎಲ್ಲ ಇಳಿದಿರುತ್ತದೆ!

★★★

ನೀವು ಪ್ರಾಮುಖ್ಯವಾದ ಕೆಲಸ ಮಾಡುತ್ತಿರುತ್ತೀರಿ. ಆಗ ಮಕ್ಕಳು ಬಂದು ಏನೊ ಅಸಂಬದ್ಧ (ಅವರಿಗೆ ಅದು ಪ್ರಮುಖವೇ) ಪ್ರಶ್ನೆ ಕೇಳುತ್ತಾರೆ. ನಿಮ್ಮ ಏಕಾಗ್ರತೆ ಹಾಳಾಗಿ ಕೆಲಸ ಕೆಡುತ್ತದೆ. ನೀವು ಆಗ ತಾಳ್ಮೆ ತಪ್ಪುತ್ತೀರಿ. ಈ ರಗಳೆಯನ್ನು ಎಲ್ಲರೂ ನಿತ್ಯ ಅನುಭವಿಸಲೇಬೇಕು.

★★★

ನೀವು ಇಷ್ಟವಾದ ಧಾರವಾಹಿಯನ್ನೊ, ಬೇರೆ ಒಳ್ಳೆಯ ಕಾರ್ಯಕ್ರಮವನ್ನು ದೂರದರ್ಶನದಲ್ಲಿ ವೀಕ್ಷಿಸುತ್ತಿರುತ್ತೀರಿ. ಆಗ ತಟ್ಟನೆ ವಿದ್ಯುತ್ ಕೈಕೊಡುತ್ತದೆ. ನೀವು ಕೆ.ಪಿ.ಸಿ.ಟಿ.ಎಲ್.ಗೆ ಶಾಪ ಹಾಕುತ್ತ ಸುಮ್ಮನಾಗುತ್ತೀರ! ಮತ್ತೇನು ಮಾಡಲು ಸಾಧ್ಯ?

★★★

ರಾತ್ರಿ ಮಲಗಿರುತ್ತೀರ. ನಿಶ್ಯಬ್ದ ವಾತಾವರಣ. ಆಗ ಪಕ್ಕದ ಮನೆಯ ತೊಟ್ಟಿಯಲ್ಲಿ ನೀರು ತುಂಬಿ ಚೆಲ್ಲುವ ಶಬ್ದ ಕೇಳುತ್ತದೆ. ಆ ಮನೆಯವರೂ ಮಲಗಿರುತ್ತಾರೆ. ಎದ್ದು ಹೇಳುವಂತಿಲ್ಲ. ಆ ತೊಂದರೆಯನ್ನು ನೀವು ಮನಸ್ಸಲ್ಲೇ ಅನುಭವಿಸಿ ಸುಮಾರು ಹೊತ್ತು (ಕಾಳಜಿ ಇರುವವರಾದರೆ) ಹೊರಳಾಡುತ್ತ ನಿದ್ರೆ ಕೆಡುವ ಪರಿಸ್ಥಿತಿ ಉಂಟಾಗುತ್ತದೆ.

ಇನ್ನೂ ಎಷ್ಟೋ ರಗಳೆಗಳನ್ನು ನಾವು ದಿನನಿತ್ಯ ಅನುಭವಿಸುತ್ತಿರುತ್ತೇವೆ. ಇಲ್ಲಿಗೆ ಇಷ್ಟು ರಗಳೆಗಳು ಸಾಕು. ಹರಿಹರನ ರಗಳೆ ಕಾವ್ಯ ಓದುವಾಗ ನಿದ್ರೆ ಬಂದಂತೆ ಈ ರಗಳೆಯನ್ನು ಓದುವಾಗ ನಿದ್ದೆ ಬಂದರೆ ನಾನು ಬರೆದ ರಗಳೆ ಏನೆಂದು ನೀವು ಓದದಿದ್ದರೆ ಕಷ್ಟ. ಹಾಗಾಗಿ ಇಲ್ಲಿಗೇ ನನ್ನ ರಗಳೆಯನ್ನು ನಿಲ್ಲಿಸುತ್ತೇನೆ. ಇನ್ನೂ ಹೆಚ್ಚಿನ ರಗಳೆ ನಿಮಗೆ ಕೊಡಲಿಚ್ಛಿಸುವುದಿಲ್ಲ!




"ಅಷ್ಟೊಂದು ಕೋಟಿ ಹಣಾನ
ಅವನು ಮರದ ಪೊಟ್ರೇಲಿ
ಇಡ್ತಾನ್ಯೇ? ಅಲ್ಲೊಂದು ಬ್ರಾಂಚ್
ಓಪನ್ ಮಾಡಿ ಸ್ವಲ್ಪ ಡಿಪಾಸಿಟ್
ಕಮಾಯಿಸ್ರೀ"

# ಹುಟ್ಟೂರ ನೆನಪು

– ಕು. ರೋ.

ಬಾಲ್ಯದಲ್ಲಿ ನಾ ಕಂಡ ನನ್ನೂರಿನ ದೃಶ್ಯ ಈಗ ನನ್ನ ಮನಸ್ಸಿಗೆ ತುಂಬ ಮುದ ನೀಡುತ್ತಿದೆ. ಆದರೆ ಆ ದೃಶ್ಯ ಈಗ ಕಾಣುತ್ತಿಲ್ಲವಲ್ಲಾ ಎಂಬ ಬೇಸರ ಆದದ್ದಿಲ್ಲ. ಆಗ ಆ ಪ್ರಕೃತಿ ಸೌಂದರ್ಯವನ್ನು ಆಸ್ವಾದಿಸುವ ರಸಿಕತೆ ನನ್ನಲ್ಲಿ ಇಲ್ಲದಿದ್ದುದರಿಂದ ಹೆಚ್ಚು ಖುಷಿ ಪಡುವ ಸಂಭವವಿರಲಿಲ್ಲ. ಆಗ ಎಲ್ಲಿ ನೋಡಿದರೂ ತೆಂಗು, ಕಂಗು, ಮಾವು, ದೊಡ್ಡ ದೊಡ್ಡ ಕಾಡುಗಳು, ಹಾಡಿಗಳು, ಎಲ್ಲಿ ನೋಡಿದರೂ ಹಸಿರು, ಕಾಡಿನ ಮಧ್ಯೆ ದಾರಿ. ಕೆಲವು ಕಡೆ ರಸ್ತೆ, ಕೆಲವು ಕಡೆ ಕಾಲ್ದಾರಿ. ಸದಾ ನೀರನ್ನು ಸಾಗಿಸುತ್ತಿದ್ದ ಹೊಳೆ - ಅದರ ಎರಡು ದಡದಲ್ಲೂ ಮರಗಿಡಗಳು, ಬರ್ಲೆಗಳು, ಬಳ್ಳಿಗಳು, ಪೊದರುಗಳು, ಹುಲ್ಲಿನ ಗಿಡಗಳು, ಹೂವಿನ ಗಿಡಗಳು - ಗದ್ದೆಯ ಸುತ್ತಲೂ ತೆಂಗಿನ ಮರಗಳು. ಗದ್ದೆಗಳಲ್ಲಿ ಒಂದಲ್ಲ ಒಂದು ಬೆಳೆ ಇದ್ದೇ ಇರುತ್ತಿತ್ತು. ಭತ್ತ, ಉದ್ದು, ಹುರುಳಿ, ತೊಗರಿ, ಕಬ್ಬು, ನಾನಾ ತರಕಾರಿಗಳು - ಹಿಂಡು ಹಿಂಡು ದನಕರುಗಳು - ಮರಗಳಲ್ಲಿ ಮಂಗಗಳು. ಬೆಳಿಗ್ಗೆ ಸಂಜೆ ನಾನಾ ಪಕ್ಷಿಗಳ ಕಲರವ - ಧೂಳಿಲ್ಲದ, ಪೆಟ್ರೋಲ್ ವಾಸನೆ ಇಲ್ಲದ, ರೆಂಜೆ ಸುರಗಿ ಪಾರಿಜಾತ ಹೂವುಗಳ ಪರಿಮಳದ ಪರಿಸರ. ಈಗಲೂ ಅವೆಲ್ಲಾ 'ಇದ್ದಿದ್ದರೆ' ಎಂದು ಎಷ್ಟೋ ಬಾರಿ ಅನಿಸಿದ್ದುಂಟು. ನಮ್ಮ ಊರು ನಮ್ಮ ಹಳ್ಳಿಯಾಗಿಯೇ ಉಳಿಯದೆ ದೇಶದ ಪ್ರಗತಿಯೊಂದಿಗೆ ತಾನೂ ಪ್ರಗತಿ ಹೊಂದಿ ಮನುಷ್ಯ ಮನುಷ್ಯನನ್ನು ಗುರುತಿಸದ ರೀತಿಯಲ್ಲಿ, ಮಾತನಾಡಿಸದ ರೀತಿಯಲ್ಲಿ, ಆತ್ಮೀಯತೆಯನ್ನು ತೋರಿಸದ ರೀತಿಯಲ್ಲಿ ಸಂಬಂಧವೇ ಇಲ್ಲದ ರೀತಿಯಲ್ಲಿ ಪ್ರಗತಿಯಾಗುತ್ತಿರುವುದನ್ನು ನೋಡಿ ಆಶ್ಚರ್ಯವಾಗುತ್ತದೆ. ಜನರೂ ಹೆಚ್ಚಾಗಿದ್ದಾರೆ, ಮಕ್ಕಳ ಸಂಖ್ಯೆಯೂ ಏರಿದೆ, ಮನೆಗಳೂ ದಟ್ಟವಾಗಿ ಮೇಲೆ ಏಳುತ್ತಿವೆ, ಅನೇಕ ಬಸ್ಸುಗಳೂ ಇತರ ವಾಹನಗಳೂ ಬಂದು ಹೋಗತೊಡಗಿವೆ, ಹಳೆಯ ತಲೆಗಳೆಲ್ಲಾ ಒಂದೊಂದೇ ಉರುಳಿ ಈಗ ಒಂದು ಭರಮಿನ ಜನ ಅಂತ ಹೇಳಲಿಕ್ಕೆ ಯಾರೂ ಉಳಿದ ಹಾಗೆ ಕಾಣುವುದಿಲ್ಲ. ಆಗ ಇದ್ದ ದೊಡ್ಡ ಕುಳಗಳೆನಿಸಿಕೊಂಡ ಲೋನಪ್ಪ, ದೊಂಬ, ಅಲಗರ, ಐತ, ಕೋಟಿ, ಲಚ್ಚ, ಪುಟ್ಟು, ತಿಜಿನ ಯಾರೂ ಈಗ ಇಲ್ಲ. ತೀರ ಬಡತನದಲ್ಲಿ ಜೀವನ ನಡೆಸುತ್ತಿದ್ದರಾದರೂ ಬಡತನವನ್ನೇ ವೈಭವೀಕರಿಸಿಕೊಳ್ಳದೆ ಅವರು ತಮ್ಮ ನಿಷ್ಠೆ ನಿಯಮ ಸತ್ಯ ಧರ್ಮಗಳ ಬಲದಿಂದ ಯಾವತ್ತೂ ತಮ್ಮ ಹಿರಿಮೆಯನ್ನು ಉಳಿಸಿಕೊಂಡೇ ಬದುಕಿದವರು. ಯಾರೂ ಅವರ ಮಾತನ್ನು ತೆಗೆದು ಹಾಕುವಂತೆ

ಇರಲಿಲ್ಲ, ಊರ ಪರವೂರವರ ಗೌರವಾದರಗಳನ್ನು ಪಡೆಯುತ್ತಾ ಒಂದು ರೀತಿಯ ರಾಜ ಮರ್ಜೆಯ ಜೀವನ ನಡೆಸಿ ಇಂದು ಇಲ್ಲವಾಗಿದ್ದಾರೆ.

ನಮ್ಮ ಆಗಿನ ಮನೆಯ ನೆನಪು ಸ್ವಲ್ಪ ಸ್ವಲ್ಪ ಉಳಿದಿದೆ. ಒಂದು ಬಚ್ಚಲು ಮನೆಯಷ್ಟೇ ದೊಡ್ಡದಾದ ಮನೆ. ಮುಳಿ ಹುಲ್ಲಿನ ಮಾಡು ಬಿದರಿನ ಗಳಗಳೇ ಜಂತಿ ಪಕ್ಕಾಸು, ಮಣ್ಣಿನ ಗೋಡೆ, ಸೆಗಣಿ ಸಾರಿಸಿದ ಮಣ್ಣಿನ ನೆಲ, ಸಿಮೆಂಟ್ ಅಂದರೆ ಏನೆಂದೇ ಗೊತ್ತಿರಲಿಲ್ಲ. ಅದರೊಳಗೇ, ಅಡಿಗೆ ಮನೆ, ಉಗ್ರಾಣ, ಇತ್ಯಾದಿ ಮಳೆಗಾಲದಲ್ಲಂತೂ ನೀರು ಹೊರಗಿದ್ದಷ್ಟೇ ಮನೆಯ ಒಳಗೂ ಇರುತ್ತಿತ್ತು. ಅಲ್ಲೇ ಊಟ, ಅಲ್ಲೇ ನಿದ್ರೆ ಅಲ್ಲೇ ಎಲ್ಲವೂ. ಅಂಥಾ ಮನೆಯೊಳಗೆ ಕಂಚಿನ ಬಟ್ಟಲಲ್ಲಿ ಕುಸುಬಲಕ್ಕಿಯ ಗಂಜಿ ಸುರಿಯುತ್ತಿದ್ದದ್ದು ನೆನಪಿಗೆ ಬರುತ್ತದೆ. ಊಟ ಮಾಡುವಾಗ ಗಾಳಿಗೆ ಮಾಡಿನ ಕರಿ ಮುಳಿಯ ತುಂಡು, ಹುಳು ಹುಪ್ಪಟೆಗಳು ಬಟ್ಟಲಿಗೆ ಬೀಳುತ್ತಿದ್ದುದೂ ಉಂಟು. ಮನೆಯ ಪಕ್ಕದ ಕೆರೆಯಲ್ಲಿ ಬಟ್ಟಲು ತೊಳೆಯುವಾಗ 'ನಿನಗೆ ಹೊಟ್ಟೆ ತುಂಬಿತಾ' ಅಂತ ನಾವು ಅಣ್ಣ ತಮ್ಮಂದಿರು ಅಕ್ಕ ತಂಗಿಯರು ಪ್ರಶ್ನಿಸಿಕೊಳ್ಳುತ್ತಿದ್ದದ್ದೂ ಉಂಟು - ಆ ಸಮಯದಲ್ಲಿ ನಮ್ಮ ಅಪ್ಪ ಅಮ್ಮ ಒಬ್ಬ ಕೂಕ್ರು ಮೇಸ್ತ್ರಿ ಎಂಬುವನನ್ನು ಕೆಲಸಕ್ಕಿಂಟುಕೊಂಡು ನಮಗೊಂದು ಸ್ವಂತ ಮನೆಯನ್ನು ಕಟ್ಟುತ್ತಿದ್ದದ್ದು ಜ್ಞಾಪಕವುಂಟು. ಮೇಸ್ತ್ರಿ ಮಗನೊಟ್ಟಿಗೆ ಆಟವಾಡುತ್ತಾ, ಆಟ ಜಗಳವಾಗಿ ಮಣ್ಣಿನಲ್ಲಿ ಹೊರಳಾಡಿ ಮಣ್ಣು ಮುಕ್ಕಿದ್ದು ಅನಂತರ ಪೆಟ್ಟು ತಿಂದದ್ದು, ಸಿಕ್ಕಾಬಟ್ಟೆ ಅತ್ತದ್ದು ಮರೆತುಹೋಗಿಲ್ಲ. ಅನಂತರ ಶಾಲೆಗೆ ಹೋದದ್ದು, ಶಾಲೆಗೆ ಹೋಗುವುದಿಲ್ಲವೆಂದು ಹಠ ಹಿಡಿದದ್ದು, ಗದರಿಸಿಕೊಂಡು ಹೊಡೆಸಿಕೊಂಡು ಬಲಾತ್ಕಾರದಿಂದ ಶಾಲೆಗೆ ಹೋಗುತ್ತಿದ್ದದ್ದೂ ಜ್ಞಾಪಕವಿದೆ.

ಆಗ ನಮ್ಮ ಶಾಲೆಯ ಡ್ರೆಸ್ ಅಂದರೆ ಒಂದು ಚಡ್ಡಿ, ಒಂದು ಅಂಗಿ, ಒಂದು ಟೋಪಿ, ಒಂದು ಕೈಚೀಲ. ವರ್ಷಕ್ಕೆ, ವರ್ಷಕ್ಕೇನು ಅದು ಪೂರ್ತಿ ನಾಶವಾಗುವವರೆಗೂ ಅದೇ ಅಂಗಿ ಚಡ್ಡಿ, ಟೋಪಿ, ಚೀಲ, ಯಾವುದೂ ಸಾಬೂನನ್ನು ಕಾಣುತ್ತಿರಲಿಲ್ಲ. ಅಪರೂಪಕ್ಕೆ ನೊರೆಕಾಯಿಯ ನೊರೆಯಲ್ಲೇ ಒಗೆಯುತ್ತಿದ್ದದೂ ಉಂಟು. ರಸ್ತೆಯ ಕೆಂಪು ಧೂಳು, ಹಣ್ಣಿನ ಸೊನೆ, ಗೇರುಬೀಜದ ಅಂಟು ಎಲ್ಲಾ ಸೇರಿ ನಮ್ಮ ಬಟ್ಟೆಗಳು ಕಲಾಮಯವಾಗಿ ಇರುತ್ತಿದ್ದವು. ಶಾಲೆಗೆ ಮಾತ್ರ ಆ ಡ್ರೆಸ್, ಮನೆಗೆ ಬಂದ ಮೇಲೆ ಬೇರೆಯೇ ಡ್ರೆಸ್, ಅದೆಂದರೆ ಲಂಗೋಟಿ ಮಾತ್ರ. ವಿಚಿತ್ರವೆಂದರೆ ನಮಗೆಲ್ಲರಿಗೂ ಬೆಳ್ಳಿಯ ಉಡಿದಾರವಿತ್ತು. ಅದೇ ದೊಡ್ಡ ಆಭರಣ. ಆದರೆ ನಾವು ಮಕ್ಕಳೆಲ್ಲಾ ಒಟ್ಟಿಗೆ

ಹೆಚ್ಚಿಗೆ ಸಮಯ ಬೆಳೆದಂತೆ ಕಾಣುವುದಿಲ್ಲ. ಅದಕ್ಕೆ ಅವಕಾಶವೂ ಇರಲಿಲ್ಲ. ಎರಡು ವರ್ಷಗಳಿಗೊಮ್ಮೆ ಹೆರುವ ಅಮ್ಮ ಒಂದು ನಿಮಿಷವನ್ನು ಹಾಳು ಮಾಡುತ್ತಿರಲಿಲ್ಲ. ಅವಳಿಗೆ ಗೊತ್ತಿರದಿದ್ದ ಕಸುಬೂ ಇರಲಿಲ್ಲ. ನೆಡುವುದು, ಕೊಯ್ಯುವುದು, ಜಪ್ಪುವುದು, ಕುಟ್ಟುವುದು, ಕಡಿಯುವುದು, ಬೇಯಿಸುವುದು, ತಿನ್ನಿಸುವುದು ಎಲ್ಲವನ್ನು ಮಾಡುತ್ತಿದ್ದಳು. ದನಕರುಗಳನ್ನು ಕಟ್ಟಿದ್ದಳು - ಕೈ ಕಾಲಿನಲ್ಲಿ ಕೆಸರು, ಸೆಗಣಿ ತಪ್ಪಿದ್ದಲ್ಲ. ಕೈಯಲ್ಲಿ ಕತ್ತಿಯೋ ಬುಟ್ಟಿಯೋ ಏನಾದರೂ ಇರುತ್ತಿತ್ತು ಮಾತಿನಲ್ಲಾಗಲೀ ಕೆಲಸದಲ್ಲಾಗಲೀ ಅವಳು ಯಾರಿಗೂ ಕಡಿಮೆ ಇರಲಿಲ್ಲ ಆಸುಪಾಸಿನ ಅನೇಕ ಮನೆಗಳವರಿಗೆ ಈ ನನ್ನ ಅಮ್ಮ ದೊಡ್ಡ ಅಮ್ಮನೇ. ಎಲ್ಲರೂ ಅವಳಿಂದ ಒಂದಲ್ಲ ಒಂದು ಸಹಾಯ ಪಡೆಯುತ್ತಿದ್ದರು.

ನನ್ನ ಅಪ್ಪನೂ ಒಂದು ಪಾಪದ ಪ್ರಾಣಿ ಅಂತಲೇ ಹೇಳಬೇಕು - ಅಪ್ಪ ಪಾಪದವರು ಅಂತ ಬಾಲ್ಯದಲ್ಲಿ ಅನಿಸುತ್ತಿರಲಿಲ್ಲ - ಈಗ ಅನಿಸುತ್ತಿದೆ - ಪೌರೋಹಿತ್ಯಕ್ಕೆ ಕರೆದಲ್ಲಿಗೆಲ್ಲಾ ಹೋಗುತ್ತಿದ್ದರು ಹತ್ತು ಇಪ್ಪತ್ತು ಮೈಲು ದೂರಕ್ಕೂ ನಡೆದುಕೊಂಡು ಹೋಗಿ ಬರುತ್ತಿದ್ದರು. ಕೆಲವು ಬಾರಿ ಅಲ್ಲಿ ಸಿಗುವ ಅಕ್ಕಿ ತೆಂಗಿನ ಕಾಯಿಗಳ ಗಂಟನ್ನು ಹೊರಲು ನನ್ನನ್ನು ಕರೆದುಕೊಂಡು ಹೋಗುತ್ತಿದ್ದರು. ಬೇಸಿಗೆ ಕಾಲದಲ್ಲಿ ನಡೆದುಕೊಂಡೇ ಹೊಳೆ ದಾಟುತ್ತಿದ್ದಾಗ ಅವರ ಕೈ ಹಿಡಿದುಕೊಂಡಿದ್ದ ನನಗೆ ನೆಲ ಸಿಗದೆ ನೀರಿನಲ್ಲಿ ಮುಳುಗಿ ಸತ್ತೇ ಹೋದೆ ಎಂಬ ಸ್ಥಿತಿ ಬಂದಾಗ ಈಜಿ ಬಹಳ ಪ್ರಯಾಸದಿಂದ ನನ್ನನ್ನು ಎಳೆದು ಹೊಳೆಯ ಹೋಯಿಗೆಯ ರಾಶಿಯಲ್ಲಿ ಮಲಗಿಸಿ ನೀರು ಕಕ್ಕಿಸಿ ಬದುಕಿಸಿದ್ದೊಂದು ಮಾತ್ರ ನೆನಪಿದೆ. ಇದೇ ರೀತಿ ಬೇರೆ ಬೇರೆ ಸಂದರ್ಭದಲ್ಲೂ ಅನೇಕ ಫಜೀತಿ ಪಟ್ಟಿದ್ದನ್ನು ಅವರು ಆಮೇಲೆ ಹೇಳಿದ ಮೇಲೆಯೇ ಗೊತ್ತಾದದ್ದು ನನಗಿಂತ ಮೊದಲು ಐದು ಜನ ಹುಟ್ಟಿದ್ದರು ನನ್ನ ನಂತರ ಐದು ಜನ. ಒಟ್ಟು ಹನ್ನೊಂದು ಜನ ಮಕ್ಕಳ ದೊಡ್ಡ ಕುಟುಂಬ ನಮ್ಮದು. ತೀರ ಕಡಿಮೆ ಆದಾಯದಲ್ಲೂ ಮಕ್ಕಳನ್ನು ಸಾಕುವುದು ಕಷ್ಟದ ಕೆಲಸವಲ್ಲವೆಂದೇ ಅವರು ಭಾವಿಸಿದ್ದರು. ಎಂಟು ಹತ್ತು ವರ್ಷವಾಗುತ್ತಲೇ ಒಬ್ಬ ಅಣ್ಣ ಮಠ ಸೇರಿಕೊಂಡ. ಇನ್ನೊಬ್ಬ ಹೋಟೆಲು ಸೇರಿಕೊಂಡ. ನಾನೂ ಹೊಟೆಲಲ್ಲೆ ಇದ್ದುಕೊಂಡು ಶಾಲೆ ಕಾಲೇಜಿಗೂ ಹೋದೆ - ಹಾಗೆಯೇ ನನ್ನ ತಮ್ಮಂದಿರು ಕೂಡಾ. ಅಕ್ಕ ತಂಗಿಯರಿಗೆ ಕಷ್ಟದಲ್ಲಾದರೂ ಮದುವೆ ಅಂತ ಆಯಿತು. ಇಬ್ಬರು ಅಕ್ಕಂದಿರು ಸತ್ತುಹೋದರು - ಒಬ್ಬ ತಮ್ಮ ಊರು ಬಿಟ್ಟೇ ಹೋದ. ಅಣ್ಣಂದಿರು ಅವರವರದೇ ಬೇರೆ ದಂಧೆ ಸ್ಥಾಪಿಸಿ ದೂರವಾದರು. ಅಮ್ಮನೂ ಮುತ್ತೈದೆ ಸಾವು ಕಂಡಳು. ಅವಳ ಹಿಂದೆ ಒಂದು ವರ್ಷ ಕಳೆದು ಅಪ್ಪನೂ 'ನಾರಾಯಣ

ನಾರಾಯಣ' ಎಂದು ಕಣ್ಣು ಮುಚ್ಚಿದರು. ಎಲ್ಲೋ ಇದ್ದ ಕೊನೆಯ ತಮ್ಮನನ್ನು ಹಿರಿಯರ ಮನೆ ಬಿದ್ದುಹೋಗಬಾರದೆಂದು ಮನೆಯಲ್ಲಿ ಉಳಿಸುವ ವ್ಯವಸ್ಥೆ ಮಾಡಲಾಯಿತು.

ನಮ್ಮೂರಿನಲ್ಲಿ ಎರಡು ಮಠಗಳಿದ್ದುವು. ಅದರಲ್ಲಿ ಒಂದು ನಮ್ಮ ಮನೆಯೇ. ಇನ್ನೊಂದು ಮಠ ಪೂರ್ಣ ನಿರ್ನಾಮವಾಗಿ ಹೋಗಿದೆ. ಈ ಸ್ಥಳಕ್ಕೆ ನಮ್ಮ ತಂದೆ, ಅಜ್ಜ, ತಂದೆಯ ಆಜ್ಜ, ಅಜ್ಜನ ಅಜ್ಜ ಯಾವಾಗ ಬಂದು ಸೇರಿದರು ಎಂಬುದರ ಬಗ್ಗೆ ಯಾವ ದಾಖಲೆಯೂ ಕಾಣುವುದಿಲ್ಲ. ನಮ್ಮ ಅಜ್ಜನನ್ನು ನನ್ನ ದೊಡ್ಡ ಅಣ್ಣ ಮಾತ್ರ ನೋಡಿದ್ದನಂತೆ, ಬಹಳ ಪಾಪದವರಂತೆ. ಮನೆ ಮನೆಗೆ ಊಟಕ್ಕೆ ಹೋಗುತ್ತಿದ್ದರಂತೆ. ಈಗ ಗದ್ದೆಯ ಸುತ್ತಲೂ ಇರುವ ತೆಂಗಿನ ಮರಗಳನ್ನು ಅವರೇ ನೆಟ್ಟು ದೊಡ್ಡದು ಮಾಡಿದ್ದಂತೆ, ಆ ಅಜ್ಜನಿಗೆ ಮೂರು ಮಕ್ಕಳು ನನ್ನ ತಂದೆ, ಚಿಕ್ಕಪ್ಪ ಹಾಗೂ ಅವರ ತಂಗಿ. ಅವರ್‍ಯಾರೂ ಇಲ್ಲ ಈಗ ಚಿಕ್ಕಪ್ಪನೂ ಚಿಕ್ಕಂದಿನಲ್ಲೇ ಊರು ಬಿಟ್ಟು ಬೆಂಗಳೂರು ಸೇರಿದ್ದರು. ಅಲ್ಲಿ ಅವರು ಬಹಳ ಸುಖವಾಗಿ ವೈಭವಾಗಿ ಇದ್ದರೂಂತ ಭಾವಿಸಿದ್ದೆವು. ಆದರೆ ಅವರು ಬಹಳ ಕಷ್ಟದಲ್ಲಿದ್ದರೆಂಬುದು ನಮಗೆ ಎಷ್ಟೋ ವರ್ಷಗಳ ಮೇಲೆ ತಿಳಿದದ್ದು. ನಮ್ಮ ಚಿಕ್ಕಪ್ಪನೂ ಬಹಳ ಒಳ್ಳೆಯ ಮನುಷ್ಯ. ಬೀಡಿ ಸೇದುತ್ತಿದ್ದರು. ಅಣ್ಣನ ಮೇಲೆ ಬಾರೀ ಪ್ರೀತಿ, ಗೌರವ. ಬೆಂಗಳೂರಿನಿಂದ ಬರುವಾಗಲೆಲ್ಲ ನಮಗೆ ಹೊಸಬಟ್ಟೆ, ಹಣ್ಣು ಹಂಪಲು ತರುತ್ತಿದ್ದರು ಅಜ್ಜಿಗೂ ಚಿಕ್ಕಪ್ಪ ಊರಿಗೆ ಬಂದರೆ ಹೊಸ ಲವಲವಿಕೆಯುಂಟಾಗುತ್ತಿತ್ತು. ಅಜ್ಜಿಗೆ ಹೊಗೆಸೊಪ್ಪಿನ ಚಟವಿತ್ತು. ಅದೇ ಚಟ ನನ್ನ ಅಣ್ಣನಿಗೆ ಮಾತ್ರ ಇದೆ. 'ಹಾರಿದನು ಹನುಮಂತ ಲಂಕೆಗೆ' ಅವರ ಕೊನೆಗಾಲದಲ್ಲಿ ಬಿದ್ದುಕೊಂಡೇ ಯಕ್ಷಗಾನದ ಧಾಟಿಯಲ್ಲಿ ಹೇಳಿದ್ದನ್ನು ಕೇಳಿದ್ದೇನೆ. ಅಪ್ಪನ ತಂಗಿ ಕೆದ್ಲಾಯರ ಮನೆಯಲ್ಲಿ ಹಾಲು ಕರೆಯುವ ಹಟ್ಟಿಗೆ ಹೋದಾಗ ಹಾವು ಕಚ್ಚಿ ಸತ್ತದ್ದನ್ನು ನೋಡಿದ್ದೇನೆ. ಅವರಗಂಡ, ಮಗ, ಮಹಾ ಕೋಪಿಷ್ಠರು. ಅವರಿಗೂ ಎರಡು ಹೆಣ್ಣು ಮಕ್ಕಳು. ಒಬ್ಬಳು ಮಾತ್ರ ಈಗ ಇದ್ದಾಳೆ. ಸುಮಾರು ಅರವತ್ತು ವರ್ಷವಿರಬಹುದು - ಮಗನ ಮಕ್ಕಳು ಒಬ್ಬರಿದ್ದಾರೆ ಅವಳಿ ಜವಳಿ. ಆ ಮಕ್ಕಳು ಈಗ ಎಲ್ಲಿದ್ದಾರೆಂದು ತಿಳಿಯದು-

''ನಮ್ಮ ಮನೆಯಲ್ಲಿ ಅಪ್ಪ ಪೂಜೆ ಮಾಡುತ್ತಿದ್ದ ಪ್ರಧಾನ ದೇವರು ದೇವಿಕಾ ದೇವಿ. ಕೃಷ್ಣನ ತಾಯಿಯಂತೆ. ಸ್ವಲ್ಪ ಸೊಂಟ ವಾರೆ ಮಾಡಿಕೊಂಡು ಅಭಯ ಮುದ್ರೆ ನೀಡುವ ಒಂದು ಕಂಚಿನ ವಿಗ್ರಹ ಈ ದೇವಿಕಾದೇವಿ. ಇದಲ್ಲದೆ ಇನ್ನು ಒಂದಲ್ಲ ವಿಗ್ರಹಗಳು, ಸಾಲಿಗ್ರಾಮಗಳೂ ಈ ದೇವರ ಕೋಣೆಯಲ್ಲಿದ್ದ ಅವಕ್ಕೆ ನಮ್ಮ ತಂದೆಯವರು ಬಹಳ ಶ್ರದ್ಧಾ ಭಕ್ತಿಯಿಂದ ಅವರಿರುವಷ್ಟು ಕಾಲವೂ ಪೂಜೆ

ಮಾಡಿಕೊಂಡು ಬಂದದ್ದನ್ನು ನೋಡಿದ್ದೇನೆ. ಅವರು ಹೇಳುತ್ತಿದ್ದಮಂತ್ರದ ಸ್ಪಷ್ಟ ಉಚ್ಚಾರಣೆ ತನ್ನ ಕಿವಿಯಲ್ಲಿ ಈಗಲೂ ಮೊಳಗುತ್ತಿದೆ. ಅಂತ ನನ್ನ ಮಗ ಹೇಳುತ್ತಾ ಇರುತ್ತಾನೆ. ನಮ್ಮ ತಂದೆಯವರೊಡನೆ ಮುಖಕ್ಕೆ ಮುಖ ಕೊಟ್ಟು ಮಾತನಾಡುವ ಒಂದು ಸಂಸ್ಕಾರವನ್ನು ನಾವು ಬೆಳೆಸಿಕೊಳ್ಳದೇ ಹೋದ್ದರಿಂದ ಈ ಮಠದ ಹಾಗೂ ದೇವರುಗಳ ಪೂರ್ವೇತಿಹಾಸವನ್ನು ನಮಗೆ ತಿಳಿದುಕೊಳ್ಳಲಿಕ್ಕಾಗಲಿಲ್ಲ, ಈಗ ಆ ಹಿರಿಯರೆಲ್ಲ ಇಲ್ಲದೇ ಇರುವುದರಿಂದ ಅವರಿವರಿಂದ ಕೇಳಿದ ಮಾಹಿತಿಗಳ ಆಧಾರದಲ್ಲಿ ಈ ಮಠದ ಬಗ್ಗೆ ಹೇಳಬೇಕಾಗುತ್ತದೆ, ಈ ಮಠಕ್ಕೆ ಸೇರಿದ 'ಆಸ್ತಿ ಎಂದರೆ ಹತ್ತು ಕೊಯಿಲು ಕಡ್ಡಿ, ಎರಡು ಕೊಯಿಲು ಹಾಡಿ, ಒಂದು ಕೊಯಿಲು ಎಂದರೆ ಈಗಿನ ಹತ್ತು ಸೆಂಟ್ಸ್ ಜಾಗ. ಇಲ್ಲಿ ಪೂಜೆ ಮಾಡಿದ್ದಕ್ಕಾಗಿ ಸರಕಾರದಿಂದ ಮರುರೂಪಾಯಿ ವರ್ಷಕ್ಕೆ ತಸದೀತು ಬರುತ್ತಿದ್ದ. ಈ ಮೂರು ರೂಪಾಯಿ ಪಡೆದುಕೊಳ್ಳಲು ನಮ್ಮ ತಂದೆ ಉಡುಪಿಗೆ ನಡೆದುಕೊಂಡೇ ಯೋಗಿ ತರುತ್ತಿದ್ದದ್ದು ನನಗೆ ಗೊತ್ತು. ಹೀಗೆ ಉಡುಪಿಗೆ ಹೋದಾಗ 'ದೇವರ ದರ್ಶನ' ಮಾಡಿ, ಚೌಕಿಯಲ್ಲಿ ಉಂಡು ಶ್ರೀಗಳಿಂದ ಮಂತ್ರಾಕ್ಷತೆ ಪಡೆದು ದಾರಿಯಲ್ಲಿ ಅಂಬಾಗಿಲಿನ ಮನೆಯಲ್ಲಿ ಸ್ವಲ್ಪ ವಿಶ್ರಾಂತಿ ಪಡೆದು ಬರುತ್ತಿದ್ದರಂತೆ.'' ಆ ಮೂರು ರೂಪಾಯಿ ಈಗಲೂ ಬರುತ್ತಿದೆ. ಅದು ಎಷ್ಟು ಮಾತ್ರಕ್ಕೂ ಹೆಚ್ಚಾಗಲಿಲ್ಲ. ಮನೆಯ ಹತ್ತಿರವೇ ಒಂದು ಕೆರೆ ಇದೆ, ಬಹಳ ದೊಡ್ಡ ಕೆರೆ ನಾಲ್ಕು ಪಾರ್ಶ್ವದಲ್ಲೂ ಕಲ್ಲು ಕಟ್ಟಿ ಮೆಟ್ಟಲುಗಳಿದ್ದುವಂತೆ. ಈಗ ಒಂದು ಬದಿಯ ಮೆಟ್ಟಲುಗಳು ಮಾತ್ರ ಕಾಣುತ್ತಿವೆ ಕಲ್ಲುಗಳ ಮೇಲೆ ಮೀನು, ಮೊಸಳೆ, ಆಮೆ ಹಾಗು ಇನ್ನೂ ಕೆಲವು ಗುರುತು ಸಿಗದ ಪ್ರಾಣಿಗಳ ಕೆತ್ತನೆ ಇದೆ, ಈ ಕೆರೆ ಮಲ್ಟಿ ಪರ್ಪಸ್ ಕರೆ. ಎಮ್ಮೆ ಕೋಣಗಳು ಇಲ್ಲಿ ಈಜಾಡುತ್ತವೆ. ಮನೆಯ ಪಾತ್ರೆ ಪರಡಿಗಳು ಶುದ್ಧಗೊಳ್ಳುತ್ತವೆ,. ಊರಿನ ಎಲ್ಲಾ ಮಕ್ಕಳೂ ಈಜು ಕಲಿತದ್ದು ಇಲ್ಲೇ, ಕೋಳೆ ಹೂವು, ಪಾಚಿ, ಮುಂಡಗೆ ಸಮೃದ್ಧವಾಗಿ ಕಾಣುತ್ತಿತ್ತು. ಈ ಕೆರೆಯ ಪಕ್ಕದಲ್ಲೆ ಒಂದು ದೊಡ್ಡ ಅಶ್ವತ್ಥ ಮರವಿತ್ತು. ಕೆಲವೊಮ್ಮೆ ಗೂಬೆಯ ಸದ್ದು ಕೇಳುತ್ತಿತ್ತು ಈ ಮರದ ಮೇಲಿದ್ದ ಮಂಗಗಳಿಗಂತೂ ಫೈವ್‌ಸ್ಟಾರ್ ಹೋಟೆಲ್ ಇದ್ದಂತೆ. ಒಂದು ರಾತ್ರಿ ಯಾವ ಮುನ್ಸೂಚನೆಯನ್ನೂ ಕೊಡದೆ, ಯಾರಿಗೂ ಹೇಳದೆ ಈ ಮರ ಬುಡ ಮೇಲಾಗಿ ಕೆರೆಯ ಮೇಲೆ ಬಿದ್ದು ತನ್ನ ಎಷ್ಟೋ ವರ್ಷಗಳ ಬಾಳ್ವೆಯನ್ನು ಕೊನೆಗಾಣಿಸಿತು. ಅದೇನಾದರೂ ವಿರುದ್ಧ ದಿಕ್ಕಿನಲ್ಲಿ ಬಿದ್ದಿದ್ದರೆ ನಮ್ಮ ಬಾಳ್ವೆಯನ್ನು ಕೊನೆಗಾಣಿಸುತ್ತಿತ್ತು. 'ದೇವರ ದಯೆ' ಅಂತ ಅಪ್ಪ ಹೇಳುತ್ತಿದ್ದರು ಆ ಮರದ ಸೌದೆ ಮನೆಗೆ ಹತ್ತು ವರ್ಷದವರೆಗೂ ಸಾಕಾಯಿತು. ಅಶ್ವತ್ಥ ಮರ ಬಿದ್ದ ಮೇಲೆಯೇ ಸ್ವಲ್ಪ ಮಂಗಗಳ ಕಾಟ ಕಡಿಮೆಯಾದದ್ದು ಅಂತ ಅಮ್ಮ ಹೇಳುತ್ತಿದ್ದಳು.

ಮನೆಯ ಹಿಂದುಗಡೆ ಒಂದು ನಾಗಬನ. ನಾಲ್ಕೈದು ನಾಗನ ಕಲ್ಲುಗಳಿದ್ದವು. ಅನಂತರ ಕೆಲವರು ಹರಕೆ ಹೊತ್ತು ಕೆಲವು ನಾಗ ಕಲ್ಲುಗಳನ್ನು ಹಾಕಿದ್ದು ಉಂಟು. ಪ್ರತಿ ನಿತ್ಯ ಈ ನಾಗನಿಗೆ ಪೂಜೆ ಆಗುತ್ತಿತ್ತು. ನಮ್ಮ ತಂದೆಯ ನಂತರ ನಮ್ಮ ಅಣ್ಣಂದಿರು ಮಠದ ಜೀರ್ಣೋದ್ಧಾರ ಮಾಡಿ ಈ ನಾಗ ಬನವನ್ನು ಜೀರ್ಣೋದ್ಧಾರ ಮಾಡಿಸಿದ್ದಾರೆ. ನಾಗ ಪಾತ್ರಿಯಿಂದ ದರ್ಶನ ಮಾಡಿಸಿದ್ದಾರೆ. ಇದ್ದ ಒಂದು ಕಾಸಾರ್ಕ ಮರವನ್ನು ಕಡಿಸಿ ನಾಗನಿಗೆ ಒಂದು ಗುಡಿಯನ್ನು ಕಟ್ಟಿದ್ದಾರೆ. ಈಗ ನನ್ನ ತಮ್ಮ ಪುರುಸೊತ್ತಾದಾಗ ಒಂದು ಚೊಂಬು ನೀರು ಅಭಿಷೇಕ ಮಾಡಿ ಬರುತ್ತಾನೆ. ಪಂಚಮಿ ಷಷ್ಠಿಗೆಲ್ಲ ವಿಶೇಷ ಪೂಜೆ ಆಗುತ್ತೆ. ಕೆರೆಯ ಜೀರ್ಣೋದ್ಧಾರ ಆಗಬೇಕೆಂಬ ಯೋಜನೆ ಯೋಜನೆಯಾಗಿಯೇ ಉಳಿದಿದೆ. ಅದಕ್ಕಾಗಿ ಮನೆಯಲ್ಲಿರುವ ನನ್ನ ತಮ್ಮ ಬಹಳ ಪ್ರಯತ್ನದಲ್ಲಿದ್ದಾನಂತೆ.

ಒಟ್ಟಿನಲ್ಲಿ ನಮ್ಮ ಪಿತ್ರಾರ್ಜಿತ ಆಸ್ತಿ ಅಂತ ಹೇಳಿಕೊಳ್ಳಲಿಕ್ಕೆ ಇದ್ದದ್ದು ಮೊದಲೇ ಹೇಳಿದಂತೆ ಒಂದು ಹತ್ತು ಕೊಯಿಲು ಗದ್ದೆ ಎರಡು ಕೊಯಿಲು ಹಾಡಿ. ಒಂದು ಕೆರೆ. ಮಠ ಕಮ್ ಮನೆ. ಇದಲ್ಲದೆ ಇನ್ನೊಂದು ಐದು ಕೊಯಿಲು ಬೈಲುಗದ್ದೆ ಇದೆ. ಆದರೆ ಇದು ಪಿತ್ರಾರ್ಜಿತವಲ್ಲ. ಈ ಗದ್ದೆ ಬೈಕಾಡಿ ಶಾನುಭೋಗರಿಗೆ ಸೇರಿದ್ದು. ಬೈಕಾಡಿ ಶಾನುಭೋಗರು ಆಗಾಗ್ಗೆ ನಮ್ಮೂರಿಗೆ ಗೇಣಿ ವಸೂಲಿಗೆ ಬರುತ್ತಿದ್ದರು. ನಮ್ಮೂರಿನ ಹೆಚ್ಚಿನ ಗದ್ದೆಗಳು ಹಾಡಿಗಳು ಅವರಿಗೇ ಸೇರಿದ್ದುವಂತೆ. ಯಾರೋ ಉಂಬಳಿ ಬಿಟ್ಟಿದ್ದಿರಬೇಕು 'ಆ ಅಜ್ಜಯ್ಯ ಬಂದಾಗ ನಮ್ಮ ಮನೆಯಲ್ಲೇ ಊಟಮಾಡಿ ನಿದ್ರೆ ತೆಗೆದು ಹೋಗುತ್ತಿದ್ದರು. ಮೆಕ್ಕ ಶೆಟ್ಟಿಯ ಕೈಯಲ್ಲಿದ್ದ ಆ ಗದ್ದೆಯನ್ನು ನಮ್ಮ ತಂದೆ ಮನೆಗೆ ಹತ್ತಿರವೇ ಉಂಟು ಅಂತ ಗೇಣಿಗೆ ಪಡೆದು ಕಾಲ ಕಾಲಕ್ಕೆ ಗೇಣಿ ಕೂಡಾ ಕೊಡುತ್ತಿದ್ದರು. ಭೂ ಸುಧಾರಣೆ ಸಮಯ ಡಿಕ್ಲರೇಶನ್ ಕೊಡಬಹುದಿತ್ತು. ಶಾನುಭೋಗರು ಉಪಯವಾಗಿ ಐದುಸಾವಿರ ರೂಪಾಯಿಗೆ ಆ ಗದ್ದೆಯನ್ನು ತಂದೆಯವರಿಗೆ ಮಾರಾಟ ಮಾಡಿಬಿಟ್ಟರು ಅಪ್ಪ ಗಳಿಸಿದ ಆಸ್ತಿ ಆ ಐದು ಕೊಯಿಲು ಗದ್ದೆ. ಅದರಲ್ಲಿ ಭತ್ತ, ಕಬ್ಬು ಉದ್ದು ಎಲ್ಲಾ ಬೆಳೆಸಿದ್ದಿದೆ, ಅಪ್ಪ ಅಮ್ಮ ಬಹಳ ಕಷ್ಟ ಪಟ್ಟು ಒಳ್ಳೆ ಬೆಳೆ ಬೆಳೆಸುತ್ತಿದ್ದರು ಆ ಗದ್ದೆಯಲ್ಲಿ ಅದು ನಮ್ಮ ತಂದೆಯ ಸ್ವಯಾರ್ಜಿತ ಆಸ್ತಿಯಾಗಿ ಉಳಿಯಿತು.

ಈ ಎಲ್ಲ ಪಿತ್ರಾರ್ಜಿತ, ಸ್ವಯಾರ್ಜಿತ ಆಸ್ತಿಯಲ್ಲಿದ್ದ ದೊಡ್ಡ ದೊಡ್ಡ ಮರಗಳೆಲ್ಲಾ ದೋಣಿ, ಹಲಗೆ, ರೀಪು, ಪಕ್ಕಾಸು, ಟೇಬಲ್ ಕುರ್ಚಿ ಮಂಚಗಳಾಗಿ ಹೋಗಿವೆ. ಗದ್ದೆಗಳಲ್ಲಿ ಬೆಳೆ ಬೆಳೆಯುವುದು ಕಷ್ಟವಾಗಿದೆ. ಕೆಲಸಕ್ಕೆ ಜನವೂ

ಸಿಗುವುದಿಲ್ಲ, ನೀರಿನ ಆಶ್ರಯವೂ ಇಲ್ಲ. ಏನೋ ಸ್ವಲ್ಪ ಅಭಿವೃದ್ಧಿ ಪಡಿಸಬೇಕೆಂಬ ತರಾತುರಿಯಲ್ಲಿ ತಮ್ಮನಿದ್ದಾನೆ. ಅವನ ತಲೆಯಲ್ಲಿ ನಾನಾ ಯೋಜನೆಗಳು ಹುಟ್ಟುತ್ತಾ ಇವೆ. ಕೆರೆ ರಿಪೇರಿ ಮಾಡಿಸಿ ಪಂಪ್‌ಸೆಟ್ ಇಡಬೇಕು. ಹಟ್ಟಿ ದೊಡ್ಡದು ಮಾಡಿ ಡೈರಿ ಮಾಡಬೇಕು - ಬತ್ತದ ಗಿರಣಿ ತೆಗೆಯಬೇಕು. ಗದ್ದೆ ಇಡೀ ತೆಂಗಿನ ತೋಟ, ಅಡಿಕೆ ತೋಟ ಮಾಡಬೇಕು - ಮನೆಯವರೆಗೆ ಕಾರ್ ಬರುವ ಹಾಗೆ ರಸ್ತೆಯಾಗಬೇಕು ಮಠದ ಆದಾಯ ಹೆಚ್ಚಿಸಬೇಕು - ಇತ್ಯಾದಿ. ಈ ಸ್ವಲ್ಪದ ಹೊಳೆಯಲ್ಲಿ ಮುಳುಗಿರುತ್ತಾನೆ ಆದರೆ ಮೇಲೇಳಲು ಕಷ್ಟ ಪಡುತ್ತಿರುತ್ತಾನೆ.

ಏನೋ ಸಾಲ ಸೋಲ ಮಾಡಿ ಅಭಿವೃದ್ಧಿ ಮಾಡ್ತೀಯಾ? ಇದೇನು ನಿನ್ನ ಒಬ್ಬನ ಆಸ್ತಿಯಾ? ನಾಳೆ ದಿನ ಪಾಲು ಕೇಳಿದರೆ ಎಷ್ಟು ಜನರಿಗೆ ಪಾಲು ಕೊಡ್ತೀಯಾ? ಈ ಪ್ರಶ್ನೆಗಳೂ ಅವನನ್ನು ಎದುರಾಗುತ್ತವೆ.

ಹೀಗೆಯೇ ಯೋಚಿಸುತ್ತೇನೆ. ನನ್ನೂರ ಆಸ್ತಿಗೆ ಯಾರೆಲ್ಲ ಪಾಲುದಾರರು?

ಪಿತ್ರಾರ್ಜಿತ ಆಸ್ತಿಗೆ ಅಪ್ಪ, ಚಿಕ್ಕಪ್ಪ, ಸಮಪಾಲು ಅಪ್ಪನ ತಂಗಿಗೂ ಪಾಲುಂಟೇ

ಅಪ್ಪನ ಪಾಲಿನಲ್ಲಿ ಎಷ್ಟು ಮಕ್ಕಳಿಗೆ ಪಾಲು? ಐದು ಗಂಡು ಆರು ಹೆಣ್ಣು, ಒಟ್ಟು ಹನ್ನೊಂದು. ಪುನಃ ಸ್ವಯಾರ್ಜಿತ ಆಸ್ತಿಯಲ್ಲಿ ಹನ್ನೊಂದು ಪಾಲು. ಏನು ಈ ಪಾಲು? ಎಷ್ಟೊಂದು ಪಾಲು? ವಕೀಲರನ್ನು ನೋಡಬೇಕೆ?

''ನೀವು ಸುಮ್ಮನೆ ತಲೆಬಿಸಿ ಮಾಡಬೇಡಿ, ನಮಗೆ ಯಾವ ಪಾಲೂ ಬೇಡ. ಹಾಗೇಂತ ಬರೆದುಕೊಟ್ಟುಬಿಡಿ. ಉಳಿದವರೂ ಹಾಗೆಯೇ ಮಾಡಿಯಾರು. ಪಾಪ ಅವನಾದರೂ ಆ ಆಸ್ತಿಯನ್ನು ಅಭಿವೃದ್ಧಿಪಡಿಸಲಿ'' ಎಂದು ಸಲಹೆ ಕೊಟ್ಟಳು ನನ್ನವಳು.

ಅದೂ ಸರಿ ಅನ್ನಿಸಿತು. ಈಗ ವರ್ಷಕ್ಕೋ ಎರಡು ವರ್ಷಕ್ಕೋ ಒಮ್ಮೆ ಊರಿಗೆ ಹೋಗಿ 'ದೇವಿಕಾ ದೇವಿ'ಗೆ ಅಡ್ಡಬಿದ್ದು ನಾಗಬನಕ್ಕೆ ಸುತ್ತು ಬಂದು ತಮ್ಮನ ಮನೆಯಲ್ಲಿ ಊಟಮಾಡಿ, ವಿಶ್ರಾಂತಿ ಪಡೆದು ಮಕ್ಕಳ ಕೈಗೆ ಏನಾದರೂ ಕೊಟ್ಟು ಹುಟ್ಟೂರಿನ ಸಂಬಂಧವನ್ನು ಇಷ್ಟಕ್ಕೆ ಮಾತ್ರ ಸೀಮಿತಗೊಳಿಸಿ ನಿಶ್ಚಿಂತೆಯಿಂದ ಇದ್ದೇನೆ, ಅಲ್ಲಿಂದ ಏನನ್ನು ತರಲಿಲ್ಲ - ಅಲ್ಲಿಗೆ ಏನನ್ನೂ ಕೊಡುತ್ತಲೂ ಇಲ್ಲ.

★★★★★

# ಒಂದು ತಾಳ ಮದ್ದಳೆಯ ನಂತರ....

– ಶ್ರೀಮತಿ ಅರುಣಾ ಆರ್. ಕಾರಂತ

ಸಿನೇಮಾ ಟಾಕೀಸಿನಲ್ಲಿ 'ದಿ ಎಂಡ್' ತೋರ್ಸಿ ಜನಗಣಮನ ಶುರುವಾಗುತ್ತಿದ್ದಂತೆ ಧಾವಂತದಿಂದ ಪ್ರೇಕ್ಷಕರು ಎದ್ದು ಹೊರಬರುವ ರೀತಿಯಲ್ಲಿ, ''ಕರದೊಳು ಪರಶು ಪಾಶಾಂಕುಶಧರನಿಗೆ ಹರುಷದಿ ಭಕುತರ ಪೊರೆವವರೆಗೆ... ಆರತೀ ಎತ್ತಿರೇ ಆರತೀ ಬೆಳಗಿರೇ... ಮಂಗಲಂ ಭಗವಾನ್ ವಿಷ್ಣು। ಮಂಗಲಂ ಮಧುಸೂದನ, ಮಂಗಲಂ ದೇವಕೀ ಪುತ್ರೋ ಮಂಗಲಂ ಗರುಡಧ್ವಜ॥ ಮುಂತಾಗಿ ಭಾಗವತರ ಏರುದನಿ ಮಲೆನಾಡಿನ ಮುಂಬೆಳಗಿನ ತಣ್ಣನೆಯ ಕಚಗುಳಿಯಿಡುವ ವಾತಾವರಣವನ್ನು ಬೇಧಿಸಿ ಅಂದಿನ ತಾಳಮದ್ದಳೆಯ ಕಾರ್ಯಕ್ರಮಕ್ಕೆ ಮಂಗಳ ಹಾಡಲಾರಂಭಿಸುತ್ತಿದ್ದಂತೆ ನೆರೆದಿದ್ದ ಸಭಿಕರು ಅರ್ಥಧಾರಿಗಳು ಅದ್ಭುತ ವಾಗ್ಝರಿಯಿಂದ ಕಟ್ಟಿದ ಯಕ್ಷಗಾನದ ಕನಸಿನ ಲೋಕದಿಂದ ಹೊರಬಿದ್ದು ಮೈಕೊಡವಿಕೊಂಡು ಗುರುಗುಜಾಯಿಸುತ್ತ ಸಭಾಂಗಣದಿಂದ ಹೊರಬೀಳತೊಡಗಿದರು. 'ಹ್ವಾಯ್, ಗಂಟಿ ಎಷ್ಟಾಯ್ತು?' 'ಆರುಕಾಲು' 'ಆರು ಕಾಲೆ?!' ''ಬೆಳ್ಗಾದ್ದೆ ಗೊತ್ತಾಯಿಲ್ಲ ಹೊರಗಿನ್ನು ಕಪ್ಪಿದದ್ ಕಂಡ್ರೆ ಏನ್ ಬೆಳ್ಗಿನ್ ನಾಕೊ ಐದು ಅಂಬಾಂಗಿತ್ತ, ಒಳ್ಗಿದಾಗ್ಳಿಕ್ ಗೊತ್ತೇ ಆಯಿಲ್ಲೆ, ಒಳ್ಳೇ ಬೆಚ್ಚಿತ್, ಹೊರ್ಗೇನೇ ಚಳಿ ಮಾರಾಯ್ರೆ. ಒಂದ್ ಸಿಂಗಲ್ ಚಾ ಆರು ಹಾಕ್ಕಂಡ್ಹೋಪಾ ಬನ್ನಿ ಮಾರಾಯ್ರೆ,'' ಎಂದರು ನಮ್ಮೂರ ಅಣ್ಣಪ್ಪಶೆಟ್ಟರು ಬಾಯಲ್ಲಿ ಹೊಗೆಯಾಡುವ ಚಾ ಕುಡಿಯುತ್ತ ನಿಧಾನವಾಗಿ ಹೊರಗಿನ ಪ್ರಪಂಚಕ್ಕೆ ಮೈಮನಗಳನ್ನು ತೆಗೆದುಕೊಳ್ಳುತ್ತಿದ್ದಂತೆ ಒಬ್ಬ ಗಿರಾಕಿ ಅಸಹನೆಯಿಂದ ದೂರದಲ್ಲಿ ನಿಂತಿದ್ದ ಹೋಟೆಲ್ ಮಾಣಿಯ ಕಡೆ ತಿರುಗಿ 'ಏಯ್, ಜಯದ್ರಥ ಇಲ್ಬಾರಾ ಎಷ್ಟೊತ್ತಿಂದ್ ಕಾಂತೆ, ಒಳ್ಳೆ ಸೈಂಧವನ ಥರಾ ನಿಂತ್ಕಂಡಿದ್ದ, ನಾ ಇಲ್ ಕೂಕಂಡದ್ದ ಕಾಂತಿಲ್ಯನಾ? ನೀ ಏನ್ ಧೃತರಾಷ್ಟ್ರದ ವಂಶದವನಾ ಕಾಂತಿ'' ಎಂದು ಗುಡುಗುಡಿಸಿದರು. 'ಇನ್ನೊಂದೆಡೆ ಅದು ನಡೆದ ''ಕರ್ಣಪರ್ವ'' ತಾಳಮದ್ದಳೆ ಪ್ರಸಂಗದ ಬಗ್ಗೆ ಭಾರಿ ಚರ್ಚೆ ನಡೆದಿತ್ತು, ಅಂದಿನ ತಾಳಮದ್ದಳೆ ಅಲ್ಲಿ ಮುಗಿದರೂ ಇಲ್ಲಿ ಮತ್ತೊಂದು ತಾಳಮದ್ದಳೆ ಅಥವಾ ''ಉತ್ತರ ತಾಳಮದ್ದಳೆ'' ಶುರುವಾಗಿತ್ತು.

ಚಾ ಕುಡಿದು ಮೈ ಕೊರೆವ ಚಳಿಯಲ್ಲಿ ಇಬ್ಬನಿಯಿಂದ ಪಸಿಯಾದ ತಣ್ಣನೆಯ ತರಗೆಲೆಗಳನ್ನು ತುಳಿಯುತ್ತ ಮನೆಯ ಕಡೆ ಹೆಜ್ಜೆಯಿಡುತ್ತಿದ್ದಂತೆ,

ಜತೆಯಲ್ಲಿದ್ದ ಐತಾಳರು, ಹ್ವಾಯ್, ಆ ಸಾಮುಗ್ರ ಎಂಥಾ ಮಾತಾಡ್ರ ಮಾರಾಯ್ರೆ, ಶಲ್ಯ ಅಂದ್ರೆ ಅವ್ರ ಕಾಣಿ. ಸ್ವಯಪ; ಸಾಮುಗ್ರ ಶಲ್ಯನಂಗೆ ಇತ್ತಿತ್ಲಾಯ್ ನಾನು ಮತ್ತೊಬ್ಬನ್ ಕಂಡಿಲ್ಲೆ. ಅವ್ರಿಗೆ ಮಾತಾಡ್ತಾ ಇದ್ಹಾಂಗೆ ಎಲ್ಲಿಂದೆಲ್ಲಾ ಎಂತೆಂಥಾ ವಿಚಾರ ಹೊಳಿತ್ತೋ! ಅವ್ರು ಹೇಳೂದ ಕೇಂತ ಇದ್ರೆ ಶಲ್ಯ ಮಾಡಿದ್ದು ಪೂರ್ತಿ ಸಮ ಅಂಬಾಂಗ್ ಅನ್ಸತ್ತ್, ಹ್ವಾಯ್, ಅವ್ರ ಎಂಬ ಹೇಳ್ರ್ರೆ ಹೇಳಿ; ಪಾಂಡು ನನ್ನ ಭಾಗ, ತಂಗಿ ಗಂಡ, ಅಂವ ರೋಗಿಷ್ಠ ಅಂತ ಗೊತ್ತಿದ್ದು ನಾವ್ ಅವ್ನಿಗೆ ಹೆಣ್ ಕೊಟ್ಟಿದ್ದ ಯಾಕ್ಹೇಳಿ? ಅಲ್ಲಿ ಇಪ್ಪುದು ರಾಜಕೀಯ ನಮ್ಗೆ ಚಂದ್ರವಂಶದವರಿಗೆ ಹೆಣ್ ಕೊಟ್ಟವ್ರು ಅವ್ರಿಗೆ ನಾವ್ ಬೇಗ್ರ್ ಅಂಬು ಗರ್ವ ಒಂದ್ಕಡೆಯಾದ್ರೆ ಚಂದ್ರವಂಶಕ್ಕೆ ಯಾರು ವಾರಿಸ್ದಾರ್ರಿಲ್ಲ ಅಂಬೊತ್ತಿಗೆ ರೋಗಿಷ್ಟ ರಾಜಕುಮಾರನಾದ್ರು ರಾಜಾ ಅಂತ ಮಾಡಿ ಆ ವಂಶ ಉಳ್ಸಿ ಬೆಳ್ಸಿ ಬೆಳಗ್ದವ್ರು ನಾವೇ ಅಂಬು ಕೋಡು ಮೂಡುದಿಲ್ಯ ನಮ್ಗೆ? ನಮ್ ಘನಸ್ತಿಕೆ ಅಂದಿನಿಂದಲೂ ಒಂದೇ ತಿಂಗಳ ಬೆಳಕಿಗೂ ಒಂದೇ ಅಂಬಾಂಗೆ ಇದೇ ನಮೂನಿ. ನಾವ್ ಏನಿದ್ರೂ ರಾಜನ್ ಮಾಡೋವ್ರು, ಮತ್ತೊಂದ್ ವಿಷ್ಯ ಗೊತ್ತಾ? ನಾವ್ ಎಲ್ಲೇ ಹೋದುರ ನಮ್ಗೆ ಮೊದ್ಲ ಮರ್ಯಾದಿ ಸಿಗ್ಕ. ಹೋದ್ ಮೇಲೆ ಏನಾದ್ರು ಒಳ್ಳೇದಾದ್ರೆ ಅದು ನಮ್ಮೊಂದಾಯ್ತ ಅಂಬಾಂಗಾಯ್ಕ ಅದೂ ಮೂರ್ನೇವ್ರ ಪಂಚಾಯ್ತಿ ಅಂದ್ರೆ ನಮ್ಗ ಭಾರೀ ಖುಷಿ, ಯಾಕಂದ್ರೆ ಮೊದ್ಲಿಗೆ ಅದ್ ನಮ್ಮನೀದಲ್ಲ. ಎರಡ್ನೇದಾಯಿ ಅದ್ರಗ್ ನಮ್ಗೇನ್ ನಷ್ಟ ಇಲ್ಲ. ಮತ್ತೂ ಒಂದ್ ಗುಟ್ಟಿನ ವಿಷ್ಯ ಅಂದ್ರೆ, ಹ್ವಾಯ್, (ಒಳದನಿಯಲ್ಲಿ) ಇದ್ ನಿಮ್ಮತ್ರವೇ ಇರ್ಲಿ. ಅಲ್ಲ್ ನಮ್ಮ ಸೈನ್ಯದಾವುಕೆ ಮಾಡುಕ್ ಜಂಬ್ರಿಲ್ಲೆ. ಮೂರೊತ್ತು ಸಮಾ ಉಂಡ್ಕಂಡ್ ಬಿದ್ಕಂಡಿದ್ದೊ. ನಮ್ಗೊ ಅನಾವಶ್ಯಕ ಖರ್ಚ ಅಲ್ದ? ಒಂದ್ ಸೈನ್ಯ ಸಾಕೂದಂದ್ರ ಸುಮ್ನಾತ್ತಾ? ಅದ್ಕೆ ಇಲ್ಬಾವ ಕರ್ದಾ ಅಂದ್ಕೂಡ್ಲೆ ಹೊರಟಿದ್ದೇ. ಹ್ಯಾಂಗಿದೆ ನನ್ನ ತಲೆ ಅಂದ್ರೆ,

ಆಗ ಜತೆಯಲ್ಲಿದ್ದ ಕುಪ್ಪಯ್ಯ ಹೆಬ್ಬಾರ್ರು, ಐತಾಳ್ರೆ, ಆ ಶಲ್ಯ ಒಪ್ಪೊತ್ತಿಗೆ ಹಾದಿ ಮೇಲೆ ಕೌರವ ಸಿಕ್ಕಿ ''ಮಾವಾ'' ಅಂದ್ಕೂಡ್ಲೆ ಶಲ್ಯ ಎಂತಾ ಹೇಳ್ದಾ ಹೇಳಿ? ''ಬಂದಾ ಇಂವೊಬ್ಬ ಘಟಂಜಲ ಯಂತ್ರ'' ಎಲ್ಲಾ ಹೋ ಎಂದ ಕೈ ತಟ್ಟಿ ನಗಾಡಿದ್ದೆ ನಂಗೆ ಮೊದ್ಲಿಗೆ ಸಾಮುಗ್ರ ಎಂತಾ ಹೇಳ್ತ್ರ ಅಂತ ಗೊತ್ತಾಯಿಲ್ಲ. ಕಡೀಗ್ ಗೊತ್ತಾಯ್ತು 'ಘಟಂಜಲ ಯಂತ್ರ' ಅಂದ್ರೆ ನಮ್ಮ ''ದೊಟ್ಟಿ-ಮರ್ಗೀ'' (ಏತ) ಅಂದ್ ಸಾಮುಗ್ರ ಕೌರವ ತಗ್ಗೀ ಬಗ್ಗೀ ಮಾತಾಡುದನ್ನ ಕೂಕಂಡಲ್ಲೇ ಆಕ್ಷನ್ ಮಾಡಿ ತೋರ್ಸುದ್ರೊಳಗೆ ಎಲ್ಲಾ ಜನ ಬಿದ್ ಬಿದ್ ನಗಾಡಿದ್ದೇ, ಅಲ್ಲ, ಇದೆಲ್ಲ ಅವ್ರ ತಲೆಯೊಳ್ಗೆ ಎಲ್ಲಿತ್ತೋ ಏನೊ? ಹಾಂಗೆ ಹೇಳ್ಕಂದು ಮೊದ್ಲೆ ಯೋಚ್ಸುದಿಲ್ಲಾಂತ ಕಾಣತ್.

ಆಗ ಜತೆಯಲ್ಲಿದ್ದ ಅಣ್ಣಪ್ಪಶೆಟ್ರು 'ಹೌದೌದು' ಸಾಮುಗ್ರ ದೊಡ್ಡ ಜನ, ಅವ್ರ ಶಲ್ಯನ್ ಮಾಡ್ರ, ಅವ್ರ ಹಾಂಗಂದ್ರ ಹೀಂಗಂದ್ರ ಅಂತ ಕೊಚ್ಕಂತ್ರಿ ಸಮ, ನಂಗೇನ್ ಬೇಜಾರಿಲ್ಲೆ, ಆದ್ರೂ ನಮ್ ಕೌರವನ್ ಸುದ್ದೀನೇ ಎತ್ತೂದಿಲ್ಲಾ ಯಾಕೆ ನೀವೆಲ್ಲ? ನಮ್ ಕಳ್ಗಿ ಹೆಗ್ಡೇರು (ಕೌರವ ಅರ್ಥಧಾರಿ) ನಿನ್ನಿಸ್ ತಾಳ, ಮದ್ದಳೆಗೆ ಸ್ವಲ್ಪ ಸಪ್ಪೆಯಾದ್ದೇನೋ ಹೌದು, ಆದ್ರೂ ನಾನ್ ಅವ್ರ ವೇಷ ಕಟ್ದಾಗ ಕಂಡಿದ್ದೆ. ಆಳು ಸ್ವಲ್ಪ ಬಡಿಯಾದ್ರೂ ವೇಷ ಲೈಯಕ್ ಒಪ್ಪುತ್ತ. ಕುಣ್ರ ಕಮ್ಮಿಯಾದ್ರು ಹೆಜ್ಜೆ ಗತ್ತು ಮಾತುಗಾರಿಕೆಯೊಳಗೆ ಮಿಂಚ್ತಿದ್ರು. ಇವತ್ತೆಂತಾಯ್ತು ಗೊತ್ತಿತೆ? ಎದ್ರಿಗ್ ಇದ್ದೌವ್ರು ಸಾಮುಗ್ರ, ಅವ್ರೆದ್ರಿಗೆ ಮತ್ತೆ ನಮ್ ಮಾಬಲ ಹೆಗ್ಡೇರ್ ಎದ್ರಿಗೆ ಮಾತಾಡ್ವಾರೆ ಸ್ವಲ್ಪ ಗಟ್ಟಿ ಎದೆಯವ್ರೇ ಆಯ್ಕು. ಮತ್ತೆ ಸಾಮುಗ್ರದ್ ಒಂದ್ ಮಿಸ್ಟೇಕೇ. ಅವ್ರು ಮಾತಾಡೂಕ್ ಹಿಡ್‌ದ್ರೆ ಅವ್ರ ಶಲ್ಯನ್ ಬಾಯಿಂದ ಹೇಳ್ದಂಗೆ ಅವ್ರ ಹೇಳಿದ್ದೇ ಆಯ್ಕ ಅದು ಆ ಪ್ರಸಂಗದಲ್ಲಿ ಆ ಪಾತ್ರಕ್ಕೆ ಎಷ್ಟು ಯೋಗ್ಯ ಅಂದ್ ಕೆಲಸಲ ಯೋಚ್ನೆ ಮಾಡೋದೇ ಇಲ್ಲ. ಅದೂ ಅಲ್ದೆ ಕೊಳ್ಗಿ ಹೆಗ್ಡೇರು ಬರೀ ಪಾಪದೌರು. ಕೌರವ್ನ ವೇಷ ಹಾಕಿ ರಾಜಗಾಂಭೀರ್ಯದಿಂದ ಕುಣ್ದು ಮಾತಾಡ್ತ್ರ ಅಂಬುದ್ ಬಿಟ್ರೆ ಅವರಲ್ಲ್ ಕುತಂತ್ರ ಯಿಲ್ಲ್ಯ ಅದೂ ಅಲ್ದ ಕೌರವನ ಬಗ್ಗೆ ಎಲ್ರಿಗೂ ಇದ್ದಾಂಗೆ ಅವ್ರಿಗೂ ಒಂಥರಾ ಕಳ್ ಮನಸ್ಸೀತ್ ಅದೇ ಪಾತ್ರ ಇವತ್ ಅಬ್ರೆ ಮಾಡೂ ಹೊತ್ತಿಗೂ ಅದ್ ಸಂಪೂರ್ಣ ಹೊಯ್ಲೇ ಇಲ್ಲ ಹಾಂಗಾಯಿ ಇವತ್ ಸಾಮುಗ್ರ ಘಟಂಜಲ, ಕಾರ್ಯಸಾಧಕ, ಹಿತ್ತಾಳೆ ಕಿವಿಯವ, ಆ ಕರ್ಣನ್ ಮಾತು ಕೇಣ್ಕಂಡ್ ನನ್ನತ್ರ ಯಾಕ್ಬಂದೆ? ಅಂದ್ ಜೋರ್ ಮಾಡೂಕು ಹೆಗ್ಡೇರ್ ತಣ್ಗಾದ್ರು. ಅಲ್ದಿದ್ರೆ ಹೆಗ್ಡೇರೇನ್ ಸಾಮಾನ್ಯರಲ್ಲ, ಇವ್ರು ಕೆರೆಮನೆ ಮೇಳ್ದಾಗಿದ್ದಾಗ ಶಂಭು ಹೆಗ್ಡೇರ್ ಕೃಷ್ಣ, ಇವ್ರ ಕೌರವ ನಾನ್ ಹತ್ತತ್ಸಲ ಕಂಡಿದ್ದೆ, ಭಾರಿ ಅಚ್ಕಟ್, ಶಂಭು ಹೆಗ್ಡೇರ್ ಸ್ಟೈಲೇ ಬೇರೆ ಆದ್ರು ಕೊಳ್ಗಿ ಹೆಗ್ಡೇರ್ ವೇಷ ಮಂಕಾತಿರ್ಲಿಲ್ಲ. ಭಾರಿ ಗೆಟಪ್ ಆತಿತ್ ಇವ್ರಿಬ್ರ ಜೋಡಿ ಎಂದು ಒಂದು ಸಿಗರೇಟ್ ಹಚ್ಚಿ ಪುಸು ಪುಸು ಹೊಗೆ ಬಿಡಹತ್ತಿದರು.

ಆಗ ಜತೆಯಲ್ಲಿದ್ದ ತಿಮ್ಮಪ್ಪ ಶೆಟ್ರು, 'ಹ್ವಾಯ್ ಅಣ್ಣಪ್ಪಶೆಟ್ರೆ, ನೀವ್ಹೇಳೂದು ನಾ ಒಪ್ಕಂಡೆ ಅಲ್ಲಾ ಅಂತಿಲ್ಲೆ, ಆದ್ರೂ, ಇವತ್ತು ಹೆಗ್ಡೇರ್ ಮಾಡಿದ್ ಸಮಾ ಆಯಿಲ್ಲೆ, ಅವ್ರು ಆ ಯಾಸ ಒಪ್ಪಂಡ್ ಮೇಲೆ ಅವ್ರ ತಾವು ಹೆಗ್ಡೇರೆಂಬುದ್ನೇ ಮರೀಕ್ ಆ ಹೊತ್ತಿಗೆ ಅವ್ರೇನ್ರಿ ಕೌರವ, ಎದ್ರಿಗ್ ಇದ್ದಂವ ಶಲ್ಯನೊ ಕೃಷ್ಣನೊ ಇನ್ನ್ಯಾವನಾದ್ರೂ ಇರ್ಲಿ, ಮುಲಾಜಿಲ್ದೆ ಮಾತಾಡ್ಕಿತ್ತ, ನಾನೇ ಆಯಿದ್ರೆ ಏನ ಶಲ್ಯ ನನ್ಮನೆ ಅನ್ನ ಉಂಡಿದೆದ ನನ್ಪಕ್ಷದಾಗ್ ಇದ್ಕಂಡಿದ್ದೆ. ನಾ ಹೇಳ್ದಾಂಗ್ ಕೇಣ್ಕು. ನಮ್ಮ ಒಳ್ಳೇದಾಪುಹಂಗೆ ಯುದ್ಧ ಮಾಡು, ಅದ ಬಿಟ್ಕಂಡು ಇಲ್ಲದ್ದೆಲ್ಲ ತಲೆಹರಟೆ

ಮಾಡ್ಕಂಡಿಪ್ರುದಲ್ಲ ಅಂತ ಜೋರೆ ಮಾಡ್ತಿದ್ದೆ. ಅಲ್ವೆ? ಶಲ್ಯ ಅಂವ ದೊಡ್ಡ ರಾಜ ಆದೆ. ಏನಾಯ್ತಂಬ್ರು? ರಾಜಾದ್ರೆ ಅವ್ನ ರಾಜ್ಯಕ್ಕೆ ನಮ್ಮ ಪಕ್ಷ ಸೇರ್ಕಂಡ ಪಾಂಡವ್ರು ಒಳ್ಳೇವ್ರು, 'ನೀವ್ ಲಫಂಗ್ರು ಭೀಷ್ಮರು ಈ ಹತ್ತದಿನ ಯುದ್ಧ ಮಾಡಿದ್ದು ಯುದ್ಧವೇ ಅಲ್ಲ, ಬರ ಹಾವು ಹರಣೆ ಹಲ್ಲಿ ಸೊಳ್ಳೆ ನೊಣನೆಲ್ಲ ಹೊಡ್ದಾಕ್ದಾಂಗ್ ಒಂದಿಷ್ಟ್ ಜನಿನ್ ಕೊಂದ್ರ, ಅಂದ್ರೆ ಆ ಮಾತಿಗ್ ಅರ್ಥ ಎಂಥ ಹೇಳಿ, ನಂಗೆ ಕೇಂತ್ ಕೇಂತ್ ಇದ್ದಾಂಗೆ ಮೈಯೆಲ್ಲ ಉರ್ದೋಯ್ತು. ಕಾಣಿ ಈ ಥರಗುಟ್ಟು ಚಳಿಯಂಗೂ ಮೈನೆತ್ರ ಎಲ್ಲಾ ಬಿಸಿಯಾಯ್ತು ಎಂದರು.

ಅದಕ್ಕೆ ಐತಾಳರು, 'ಹ್ವಾಯ್, ರಕ್ತ ಬಿಸಿಯಾದ್ದ ಅದ್ಕಲ್ಲ ಶೆಟ್ರೆ ನಿನ್ನೆ ರಾತ್ರಿ ಹಾಕಿದ ತೀರ್ಥದ ಪ್ರಭಾವ ಅಷ್ಟೆ, ಹೆಗ್ಡೇರ್ ಜಾಗ್ದಾಗೆ ನಿನ್ನೆ ನೀವೇ ಇದ್ದಿದ್ರೆ ಅಲ್ ಹೀಂಗ್ ಬಾಯ್ ಹರ್ಕಂಡಿದ್ದಿದ್ರೇ ಅಲ್ಲಿ ವ್ಯಾಸನ ಮಹಾಭಾರತ ಆಪು ಬದ್ಲಿಗೆ ಶಲ್ಯವಧೆ ಆತಿತ್ ಅಷ್ಟೆ.

ಹೌದೌದು, ಐತಾಳ್ರೆ, ನಾನೇನ್ ನಿಮ್ಮಷ್ಟು ಮಾಭಾರತ, ರಾಮಾಯ್ಣ, ಓದ್ಲಿಲ್ಲ ಸಮ. ಹಾಂಗಂತ ನ್ಯಾಯ ಅಂಬುದೊಂದಿತ್ತಲ್ದೆ? ಅವ... ಅಂವ... ಶಲ್ಯ ಮಾಡಿದ್ದ ಸಮ ಅಂತ ನಿಮ್ಮೆದಿ ಮುಟ್ಕಂಡ ಹೇಳಿ ಕಾಂಬೊ ನಾನೇನ್ ಕೌರವ ಒಳ್ಳೇಂವ ಅಂತೇಳ್ತಿಲ್ಲೆ, ಅಂವ್ನ ಪಕ್ಷಕ್ಕೆ ಸೇರ್ಕಂಡ ಮೇಲೆ ಅವ್ನಿಗ್ ಸರ್ಯಾಯಿ ನಡ್ಕಣ್ಣು, ಆದ ಬಿಟ್ಕಂಡ ಯಜಮಾನ ಹಾಳಾದ್ರೂ ಅಡ್ಡಿಲ್ಲೆ, ನಾ ಮಾತ್ರ ನನ್ನ ಮೂಗಿನ ಸಮಕ್ಕೆ ಹೋತೆ ಅಂದ್ರ ಅತ್ತೇ? ಹ್ವಾಯ್, ಆ ಶಲ್ಯ ಒಬ್ನೆ ಅಲ್ದೆ ಕೌರವನ ಬೆನ್ನಿಗೆ ಚೂರಿ ಹಾಕ್ದಾವ್ರು. ಹೆಚ್ಚು ಕಮ್ಮಿ ದೊಡ್ಡ ಮನಸ್ರು ಅಂಬೊ ಜನ ಎಲ್ಲಾ ಇದ್ಕೇನ್ನೆ ಮಾಡಿದ್ದು. ಅಬ್ರಿಗ್ ಒಟ್ಟಾರೆ ತಾವು ಒಳ್ಳೇವ್ರು ಅನ್ಕಂಬು ಚಟ. ಭೀಷ್ಮರೇ ತಕಣಿ, ಈಚೆಗೆ ಧರ್ಮರಾಯ ಬಂದ್ರೂ, 'ನೀ ಯೇನ್ ಯೋಚ್ನೆ ಮಾಡ್ಬೇಡ ಮಗಾ, ನಿನಿದ್ದೆ, ನಂಗ್ ನೀನೂ ಒಂದೇ, ಕೌರವನೂ ಒಂದೇ ನಿಮ್ಗೇನ್ ಆಗ್ದೇ ಇದ್ದಂಗ್ ಕಂಡ್ಕಂತಿ ಅಂದ್ರು. ಇತ್ಲಾಯು, ದ್ರೋಣಾಚಾರ್ರು ಹಾಂಗೆ ಮಾಡಿದ್ರು. ಎರ್ಡೂ ಕಡೆಯವ್ರು ಮಾರಾಮಾರಿ ಹೊಯ್ಕಂಬೊತ್ತಿಗೆ ಯಾರೊ ಅಶ್ವತ್ಥಾಮ ಸತ್ತ ಅಂದದ್ದೇ ತಡ ಯುದ್ಧರಂಗದ ನಮೂನೆ ತನ್ಮಗ ಚಿರಂಜೀವಿ ಅಂವ ಹ್ಯಾಂಗ ಸಾಯೂಕ್ ಸಾಧ್ಯ ಅಂದು ವಿಚಾರ್ಸ್ಕಂಬುಕೆ ದೇಹ ಬಿಟ್ಹೋದ್ರು, ಇಲ್ಲಿ ಇವ್ರ ಹೆಣ ಬಿತ್ತು, ಅಲ್ಲ ಆ ಬ್ರಾಹ್ಮಣಂಗಷ್ಟೂ ಮಂಡಿ ಇಲ್ಯ? ಚಿರಂಜೀವಿಯಾಗಲಿ ಅಂದು ದೇವರ ವರ ಇದ್ದ ಮೇಲೆ ಆ ಧಮರಾಯ ಅಶ್ವತ್ಥಾಮ ಹತ ಅಂದದ್ದೇ ತಡ ಪೂರ್ವಾಪರ ಯೋಚ್ನೆ ಮಾಡ್ದೇ ಎದ್ಕಂಡ್ ಹೋಪುದ? ದೇವರ ವರ ಆದ್ರೂ ಸುಳ್ಳು, ಧರ್ಮರಾಯ ಸುಳ್ಳು ಹೇಳೂದಿಲ್ಲ ಅಂಬು ನಂಬಿಕೆ ಇವ್ರಿಗೆ ಇನ್ ಈ ಕರ್ಣ ಒಬ್ಬ ಇವ್ರ ಜತೆ ಸೇರ್ಕಂಡಿದ್ದ. ಹ್ವಾಯ್,

ನೀವು ಏನೇ ಹೇಳಿ ಇಡೀ ಮಾಬಾರತ್ದಾಗೆ ಕರ್ಣ ಒಂದ್ ಚೆನ್ನ, ಚೆನ್ನ ಇದ್ದಾಂಗೆ, ನರಮನಸ್ರಾಂಗೆ ಅವ್ನಂತೋರು ಸೂಡಿ ಹಚ್ಕಂಡು ಹುಡುಕ್ರೂ ಸಿಕ್ಕ. ಅಂವ ಯಾವ್ದ್ರಾಗೆ ಯಾರಿಗೇನ್ ಕಮ್ಮಿ? ರೂಪ್ದಾಗ? ಗುಣ್ದಾಗ? ಪರಾಕ್ರಮದಾಗ? ಯಾವುದ್ರಾಗೆ ಕಡ್ಮೆ? ಆದ್ರೂ ಒಂದ್ ಐಬು. ಹೊತ್ತುಗೊತ್ತಿಲ್ದೆ ಯಾರೇನ್ ಕೇಂಡ್ರೂ ಇಲ್ಲಾ ಅನ್ದೇ ಕೊಟ್ಟ, ಕೊಟ್ಟ... ಕೊಟ್ಟ... ಕೊಟ್ಟ. ಕೊಟ್ಟಾದ್ಮೇಲೆ ಕೊಟ್ರೂ ಕೊಟ್ರೂ ತನ್ನ ಕೈ ತಾನೇ ಕಟ್ಟ್ಯಾಯ್ಕಂಡ, ದೊಡ್ಡ ದಾನಸೂರ ಅಂಬು ಬಿರ್ದು ಸಿಕ್ತು ಅಷ್ಟೇ, ಹುಟ್ಟಿ ಇಷ್ಟ್ವರ್ಷ ನೆನಪಿಲ್ದಾಂಗಿದ್ದ ಅಬ್ಬೆ ಕುಂತಿ ಬಂದ್ 'ಮಗ್ನೇ, ನಿನ್ನ ತಮ್ಮಂದಿರ್ನ ಉಳ್ಸು' ಅಂದ್ರು, ಅದ್ಕೂ ಹುಂ, ಅಂದ ಇತ್ಲಾಯಿ ಕೃಷ್ಣಬಂದ ಪಾಂಡವರು ನಿನ್ನ ತಮ್ಮಂದ್ರು, ನೀನೆ ರಾಜಾ ಆಗು ಆದಾಗ್ದೆ ಇದ್ರೆ ಅವ್ರನ್ನಾರು ಉಳ್ಸು ಅಂದ. ಅದ್ಕು ಹೂಂ ಅಂದ, ಒಟ್ಟಾರೆ, 'ಜೋಳವಾಳಿಗೆ ತಲೆಯ ಮಾರುವುದೊಂದು ಪುಣ್ಯ ಬೆಳಸು... ನಿನ್ನಯ ವೀರರೈವರನು ನೋಯಿಸೆನು' ಅಂದ. ಮಾತ್ಕೊಟ್ನಲ್ಲ ಕೃಷ್ಣಂಗೆ, ಇದ್ ಸುಮ್ನಾ? ಅಲ್ಲ ಮಾಭಾರತ ಯುದ್ಧ ಆಪ್ಕೆಂತಕ್ಕ ಆ ಕರ್ಣನಿಗೆ ಉಳ್ದವ್ರಿಗೆ ಕೊಟ್ಟ ಮಾತ್ರೆಲ್ಲ ನೆನಪಿತ್ತು ಆದ್ರೆ ನನ್ನನ್ನೆ ನಂಬ್ಕಂಡಿದ್ದ ಕೌರವನ್ನ ಉಳ್ಸುಕೆ ಪಾಂಡವರ್ನ ತಗೀಕ್ ಅಂಬುದು ಗೊತ್ತಿಲ್ಲ್ಯ? ಅಂವ ಯುದ್ಧಕ್ ಬಂದದ್ ಎಂತಕೆ ಮತ್ತೆ? ಬರಿ ಸಯುಕೆ ಆಯಿದ್ರೆ ಇಲ್ಯಾಕ ಬರ್ಕಿತ್? ಮನೆಫೆ ನೇಣ್ ಹಾಕ್ಕಂಡಿದ್ರೆ ಬತ್ತಿಲ್ಯಾ? ಈಗ ಶಲ್ಯನ ಸರದಿ. ಏನೊ ಗಾದೆ ಹೇಳ್ತ್ರಲ್ಲಾ ಉಂಡ ಮನಿ ಗಳಾ ಎಣಿಸೊ ಜನಾ ಎಲ್ಲಾ ಸೇರ್ಕಂಡ ಕೌರವನ ವಂಶ ನಿರ್ವಂಶ ಮಾಡಿಬಿಟ್ರು. ನಾನೇ ಆಯಿದ್ರೆ ಈ ಎಲ್ಲಾ ಕಳ್ಳ ನನ್ನ ಮಕ್ಳಿಗೆ ಆಗಿಂದಾಗ್ಗೆ ಗೇಟ್‌ಪಾಸ್ ಕೊಟ್ಟು ಗೆಟೌಟ್ ಅಂತಿದ್ದೆ. ಎಂದರು ಶೆಟ್ರು.

ಅದಕ್ಕೆ ಐತಾಳರು ಹ್ವಾಯ್, ಶೆಟ್ರೆ ಹೋಯ್ಲಿ ಬಿಡಿ, ಆಯಾತು ಹೋಯಿತು, ಕೌರವನ ಹಣೆಗೆ ಹಂಗೇ ಬರ್ಕಂಡಿತ್ತು, ಹೀಂಗೆ ತೊ ಮುರ್ಕಂಡು ಬಿದ್ಕಂಡು ಕಣ್ಣಲ್ನೀರಿಳ್ಸಿಕಂಡು ಸಾಯಿ ಅಂತ ವಿಧಿ ಬರ್ದಿತ್ತು ಹಂಗೆ ಆಯ್ತು, ಆ ಬ್ರಹ್ಮ ಒಂದ್ಸಲ ಹಣೆ ಮೇಲೆ ಬರ್ದದ್ದ ಎರಡ್ನೆ ಸಲ ಬರೀತ್ನಾ ಅಂತ ನನ್ನಜ್ಜಿ ಹೇಳ್ತಿದ್ದದ್ದು ಸುಳ್ಳಾ? ಈ ದಿಂಬ್ದಾಗೆ ಉಸ್ರಿಪ್ಪ ತನ್ನ ತಾನು ನನ್ದು ಅಂಬುದು, ಮೀಸೆ ಮೇಲ್ ಹೈಹಾಕ್ಕಂಡ್ ''ಭಲ್ಲಿರೇನಯ್ಯ, ಭಳಿರೇ ಪರಾಕ್ರಮ ಕಂಠೀರವ ಯಾರಂತ ಕೇಳಿದ್ದೀರಿ?'' ಅಂತ ಸೊಕ್ಕಿ ಮೆರೂದು ಗ್ರಾಚಾರ ಕೆಟ್ರೆ ಕಡೀಗೆ ಅದೆ ಎಲ್ಲಾ ಉಲ್ಟಾ ಹೊಡೀತ್, ನಮ್ ಕೈಯ್ಯಾಗ್ ಎಂತಿತ್? ಎಲ್ಲಾ ವಿಧಿಯಾಟ ಅಂವ ಕುಣಿ ಅಂದ್ರ ಕುಣುದು ಮಲ್ಕೊ ಅಂದ್ರ ಮಲ್ಕಂಬುದು ಅಷ್ಟೆ ಅಲ್ದೆ ಶೆಟ್ರೆ?

ಹೌದೌದು ನೀವಂಬುದು ಒಂದ್ ಲೆಕ್ಕಕ್ ಸಮ. ಆದ್ರು ಕಾಣಿ ಸಾಮಗ್ರ ಮಾತಂತ್ರ, ನಂಗೂ ಖುಷಿಯೆ ಅವ್ರು ಪದಕ್ಕ ತಕ್ಕ ಮಾತು, ಎದುರಾಳಿ ಬಾಯಿ

ಮುಚ್ಚು ತಾಕತ್ತು ಸಮಯಕ್ಕ ತಕ್ಕ ಗಾದೆ, ಧ್ವನಿಯೇರಿಳಿತ ಎಲ್ಲಾ ಮೆಚ್ಚುವಂತಾದ್ದೆ. ಆದ್ರು ಅವ್ರು ಶಲ್ಯನ್ ಸಮರ್ಥನೆ ಮಾಡ್ಕಂಡಿದ್ದು ನಂಗೇನು ಹಿಡ್ಸಲಿಲ್ಲ. ಸಾಮಗ್ರು ಇವತ್ತು ಶಲ್ಯನ್ ಬದ್ಲೀಗೆ ಕೌರವ್ನ ಮಾಡ್ಕಿತ್ತು ಅದ್ರ ಕತಿಯೇ ಬೇರೆ ಆತಿತ್. ಪಾಂಡವ್ರು, ಕೃಷ್ಣೆ ದ್ರಿಟ್ಕಂಡ್ ಯುದ್ಧ ಗೆದ್ದಿಪ್ಕ ಸಾಕು. ಆದ್ರೆ ಇಲ್ಮಾತ್ರ ಸಾಮುಗ್ರಿಗೆ ಕಪ್ಪ ಕೊಟ್ಟೆ ಹೋತಿದ್ರು ಕಾಣಿ ಎಂರು ಶೆಟ್ಟರು.

ಇನ್ನು ಬಾಕಿಯೋರೆಲ್ಲಾ ಅಡ್ಡಿಲ್ಲೆ, ಕರ್ಣನ್ ಮಾತ್ನಂಗೆ ತೂಕ ಇದ್ರೂ ಸಾಮುಗ್ರ ಮುಂದೆ ಭಾರಿ ಡಲ್ಲಾಯ್ತು ಕಾಣಿ, ಇನ್ ಯಾಜಿಗಳ ಕೃಷ್ಣ... ಎಂದು ಶೆಟ್ಟರು ಮಾತು ಮುಂದುವರೆಸುತ್ತಿದ್ದಂತೆಯೆ ಮಧ್ಯದಲ್ಲಿ ತಡೆದು ಹೆಬ್ಬಾರರು, ''ಹೌದೌದು ಶೆಟ್ರೆ, ಐದು ಬೆರಳು ಒಂದೆ ಸಮ ಇರುತ್ತಾ? ಎಂಥಾ ಘಟಾನುಘಟಿಗಳಾದ್ರು, ಒಂದೊಂದ್ಸಲ ಸೋಲುದಿಲ್ಲ್ಯಾ ಅದೂ ಅಲ್ದೆ ತಾಳಮದ್ದೇಗೆ ಸೆಟೇಜಿನ್ಮೇಲ್ ಕೂಕಂಡ್ ಅರ್ಥ ಹೇಳೂದಂದ್ರೆ ಏನ್ ಹುಡುಗಾಟಿಗೆಯಾ ಅಲ್ಲಿ ನೀವೇ ಕೌರವಾಗಿ ಕೂಕಂಡಿದ್ದು ಎದ್ರಿಗಿದ್ದವ ''ಎಲವೋ ಕೌರವ'' ಅಂದ್ಕಂಡ್ ಅಬ್ಬರಿಸದ್ರ ಸಾಕು, ಕೌರವ್ನ ಪುಂಗಿ ಬಂದೇ ಆತಿತ್ ಗೊತ್ತಾ? ಎಂದರು.

ಆಗ ಐತಾಳರು, ಹ್ವಾಯ್ ಶೆಟ್ರೆ ಹೆಬ್ಬಾರ್ರೇ, ನಮ್ಮನಿ ಬಂತು ಈಗ್ಲೆ ಆರೂವರಿ ಆಯ್ತು ಇನ್ ಎಮ್ಮಿಗ್ ಅಕ್ಕಚ್ ಹಾಕ್ಕ್ ಶೆಗಣಿ ಹಿಂದಕ್ಕೆಳೀಬೇಕು, ಹಸಿಹುಳ್ಳು ಕೊಯ್ದು ತರ್ಕು, ಒಂದೇ ಎರಡೆ. ಇನ್ನು ರಾತ್ರಿ ಜಾಗರಣೆ ಮಾಡ್ಕಂಡು ಮನಿಗ್ ಬಂದು ಹಸೀಗ್ ತಲಿ ಕೊಟ್ರೆ ಗಮ್ ರಥ ಮುಂದ್ಹೋತಿಲ್ಲಾ ಬಾಮಿ ಕಟ್ಟೀಗ್ ಹೋಯಿ ಸಮಾ ನಾಕ್ಕೊಡಾ ತಣ್ಣೀರ್ ಹೊಯ್ಕಂಡ್ರೆ ನಿದ್ದಿಯೆಲ್ಲಾ ಓಡಿ ಹೊತ್ತು, ಹೌದಾ ನಾ ಬತ್ತೆ, ಮತ್ ಸಿಕ್ತೆ'' ಎಂದು ವಿದಾಯ ಹೇಳಿದರು.



''ನೋಡ್ರಿ, ನಿಮ್ಮಗ
ಚಿಕಾಗೋದಲ್ಲಿರ್ಹೋದು.
ನಮ್ಮೋನು ವಾಷಿಂಗ್ಟನ್ನಿನಲ್ಲವ್ವೆ,
ತಿಳ್ಕಳ್ಳಿ''

# ಹಾಸ್ಯಬ್ರಹ್ಮ - ಕೊರವಂಜಿ ಅಪರಂಜಿ ಟ್ರಸ್ಟ್

# ಹಾಸ್ಯೋತ್ಸವ - 2K

## ಪಾವೆಂ ಆಚಾರ್ಯ - ನಾಡಿಗೇರ್ ಕೃಷ್ಣರಾವ್ ಸಂಸ್ಮರಣೆ

| | | |
|---|---|---|
| ದಿನಾಂಕ | - | 25-12-2000 ಸೋಮವಾರ |
| ಸಮಯ | - | ಬೆಳಿಗ್ಗೆ 10.30 ರಿಂದ 5.30 |
| ಉದ್ಘಾಟನೆ | - | ಶ್ರೀ ಎನ್. ರಾಮಾನುಜ<br>ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರು<br>ಎಚ್.ಎಂ.ಟಿ.ಲಿ. ಬೆಂಗಳೂರು. |
| ಪಾವೆಂ ನೆನಪು | - | ಶ್ರೀ ಶ್ರೀನಿವಾಸ ಹಾವನೂರು |
| ನಾಡಿಗೇರ್ ನೆನಪು | - | ಪ್ರೊ.ಜಿ. ಅಶ್ವತ್ಥನಾರಾಯಣ |
| ನಾಡಿಗೇರ ನಗೆ ಪ್ರಪಂಚ | - | ಶ್ರೀ ವೈ.ಎನ್. ಗುಂಡೂರಾವ್ |
| ಜಾನಪದದಲ್ಲಿ ಹಾಸ್ಯ | - | ಪ್ರೊ. ಕೃಷ್ಣೇ ಗೌಡ |
| ಹಾಸ್ಯಗೀತೆಗಳು | - | ಪಾರ್ವತೀಸುತ |
| ನಗೆ ವೈವಿಧ್ಯ | - | ಶ್ರೀ ಮುಖ್ಯಮಂತ್ರಿ ಚಂದ್ರು |
| ನಗೆ ತುಣುಕುಗಳು | - | ಶ್ರೀ ಶಂಕರ ಬಿಲ್ಲಿಮನೆ - ಮಾಸ್ಟರ್ ತೇಜಸ್ |
| ಕುಂಚದಲ್ಲಿ ನಗೆಯ ಛಾಪು | - | ಶ್ರೀ ಜಿ.ಕೆ. ಶ್ರೀನಿವಾಸ ವರ್ಮ |
| ಗಾನ, ಹಾಸ್ಯ ವೈವಿಧ್ಯ | - | ಗಾನವಿನೋದಿನಿ ತಂಡ |

ಹಾಸ್ಯ ಪುಸ್ತಕಗಳ ಬಿಡುಗಡೆ

ಉಸ್ತುವಾರಿ : **ಪ್ರೊ. ಅ.ರಾ. ಮಿತ್ರ**

ಸ್ಥಳ : ಹೆಚ್.ಎನ್. ಕಲಾಕ್ಷೇತ್ರ, ಜಯನಗರ

# ಬೈಗಳಿಗೆ Bye

**- ಬೇಲೂರು ರಾಮಮೂರ್ತಿ**

ನಮ್ಮ ಕೋಪ ತೋಡ್ಕೊಳೋಕೆ ಯಾರ್ನಾದ್ರೂ ಸಾರ್ವಜನಿಕವಾಗಿ ಬಯ್ಯೋಮೊಂದ್ರೆ ಬಲು ಕಷ್ಟದ ಕೆಲಸ. ಯಾಕೇಂದ್ರೆ ಬೈಸ್ಕೊಂಡೋನ್ಗಿಂತ ಬೈದೋನ್ನೇ ಎಲ್ರೂ ಕೆಕ್ಕರಿಸಿಕೊಂಡು ನೋಡೋದು. ಆಗ ಅವನು ಇದಿಕ್ಕೆ ಬೈದೆ ಅಂತ ಸಮಜಾಯಿಶಿ ಬೇರೆ ಕೊಡಬೇಕಾಗುತ್ತೆ. ಆದ್ರೆ ಬೈದೇ ಇರೋದಾದ್ರೂ ಹೇಗೆ. ಎಷ್ಟೋ ಸಾರಿ ಒಂದೆರಡು ಬಾರಿ ಗೊಣಗಿ ಸುಮ್ನಾಗೋದು ಸಾಕಾಗೋದೇ ಇಲ್ಲ. ಒಂದ್ಯೆದು ನಿಮಿಷ ಬಾಯಿಗೆ ಬಂದ ಹಾಗೆ ಬೈದು ಭುಸಭುಸ ಅಂತಿರಬೇಕಾಗುತ್ತೆ. ಆದರೆ ಎಲ್ಲದಕ್ಕೂ ಸುಲಭೋಪಾಯವಾಗಿ ಅನೇಕ ವಿಧಿವಿಧಾನಗಳಿವೆ. ಅಂಥವುಗಳನ್ನನುಸರಿಸಿದರೆ ಟೆನ್ಷನ್ನು ಕಡಿಮೆ. ಜೊತೆಗೆ ಸ್ಯಾಟಿಸ್‌ಫ್ಯಾಕ್ಷನ್ ಕೂಡಾ. ಹೀಗೆ ಸುಲಭೋಪಾಯಗಳನ್ನು ಹುಡುಕಿ, ಆರಿಸಿ, ಅನುಷ್ಠಾನಗೊಳಿಸೋದ್ರಲ್ಲಿ ನಮ್ಮ ಅಪ್ಪಣ್ಣ ಸಿದ್ಧ ಹಸ್ತ.

ವೆಹಿಕಲ್ ಓಡಿಸೋರ್ನ ನೀವು ನೋಡಿರಬಹುದು. ಯಾರೋ ಅಡ್ಡ ಬಂದ್ರು, ಎಡಗಡೆಯಿಂದ ಓವರ್‌ಟೇಕ್ ಮಾಡಿದ್ರು, ಸಡನ್ನಾಗಿ ಬ್ರೇಕ್ ಹಾಕಿದ್ರು ಮುಂತಾದ ಕಾರಣಗಳಿಗೆ ಸ್ಟೇರಿಂಗ್ ಹಿಡಿದು ಕೂತಿರೋ ಮನುಷ್ಯ ಬಾಯಿಗೆ ಬಂದ ಹಾಗೆ ಬೈಯಬಹುದು. ಆದರೆ ಇವನು ಬೈದಿದ್ದು ಅವನಿಗೆ ಕೇಳಿಸ್ತೇ ಇಲ್ವೇ, ಇವನ ಬೈಗುಳದಿಂದ ಅವನು ಬುದ್ಧಿ ಕಲ್ತುಕೊಂಡ್ನೇ ಇಲ್ಲೇ ಗೊತ್ತಿಲ್ಲ. ಆದರೆ ಬೈದಿದ್ದೇ ಇವನಿಗೆ ಬಂದ ಲಾಭ. ಆದರೆ ಅಪ್ಪಣ್ಣ ಮಾಡಿದ್ದೇನಪ್ಪ ಅಂದ್ರೆ ತಾನು ಜೋರಾಗಿ ಬೈದ್ರೂ ಇತರರಿಗೆ ಗೊತ್ತಾಗಬಾರದು ಆದ್ರೆ ಬೈದ ಸಂತೋಷ ತಮಗಾಗಬೇಕು . ಅದ್ಕೇ ಉಪಾಯ. ಇಂಥಾ ಉಪಾಯಗಳನ್ನು ಯಾರ ಮೇಲೆ ಉಪಯೋಗಿಸಬಹುದಪ್ಪ ಅಂದರೆ ನಮಗೆ ತೀರ ಹತ್ತಿರದವರು, ಅಂದರೆ ಬಾಸು, ಕೆಲವು ನೆಂಟರು, ಕೆಲವು ಸ್ನೇಹಿತರು. ಹೀಗೆ ಕೆಲವೇ ಮಂದಿಗೆ ಇಂಥವನ್ನು ಜೋರಾಗಿ ಪ್ರಯೋಗಿಸಲೂಬಹುದು. ಅಂದರೆ ಕೆಲವು ವೇಳೆ ಕೆಲವರಿಗೆ ಸಮಜಾಯಿಶಿ ಕೊಡಬೇಕಾಗುತ್ತೆ.

ಇರ್ಲಿ ಅಪ್ಪಣ್ಣ ಏನುಪಾಯ ಮಾಡ್ದ ಅಂತ ನಾವು ಒಂದಿಷ್ಟು ತಿಳ್ಕೊಳೋಣ ಅಲ್ವಾ. ಒಂದಿನ ಅಪ್ಪಣ್ಣಂಗೆ ತುಂಬಾ ಕೋಪ ಬಂದಿತ್ತು. ಆಫೀಸಿಗೆ ಬಂದೋನೇ ಥತ್ ದರಿದ್ರ ಒಳ್ಳೇ KNM ಸಹವಾಸ ಆಯ್ತು ಅನ್ನುತ್ತ ದೊಪ್ಪನೆ ಕುರ್ಚೀಲಿ ಕೂತ. ಆವತ್ತು ಯಾರನ್ನೋ ಸಖತ್ತಾಗಿ ಬೈಯೋ ಮೂಡಿತ್ತು ಅವನಿಗೆ. ಯಾರು, ಏನು, ಎತ್ತ ಅಂತ ಗೊತ್ತಾಗ್ಲಿಲ್ಲ. ಮುಖ ಮಾತ್ರ ಕೆರಳಿತ್ತು. ಕೊಲೀಗ್ಸ್ ಕೇಳಿದರೆ

ಆಮೇಲೆ ಹೇಳ್ತೀನಿ ಅಂತ ಹೇಳಿ ತನ್ನ ಕೆಲಸದಲ್ಲಿ ನಿರತನಾದ. ಯಾವುದೋ ಕೆಲಸಕ್ಕೆ ಬಾಸ್‌ಸ ರೂಮಿಗೆ ಹೋಗಿದ್ದವ ಹಿಂದಕ್ಕೆ ಬಂದು ಫೈಲ್‌ಗಳನ್ನು ರಪ್ಪಂತ ಟೇಬಲ್ ಮೇಲೆಸೆದು ಬಾಸ್ ಒಂಥರಾ LNM ಅಂದ. ಬೆಳಿಗ್ಗೆ KNM ಆಯ್ತು. ಈಗ LNM. ಇದೇನಪ್ಪ ಅಂತ ಎಲ್ರಿಗೂ ಆಶ್ಚರ್ಯ.

ಮಧ್ಯಾಹ್ನ ಲಂಚ್ ಅವರ್‌ನಲ್ಲಿ ಸೇರಿ ಅಪ್ಪಣ್ಣನ್ನ ಹಿಡ್ಕೊಂಡು ಕೇಳಿಯೇ ಬಿಟ್ಟ. ''ಅದೇನು ವರಸೆ ತೆಗೆದಿದೀಯ. ನೀನೊಬ್ಬೆ ಎಂಜಾಯ್ ಮಾಡಿದ್ರೆ ಆಯ್ತಾ, ನಮಗೂ ಒಂದಿಷ್ಟು ಹೇಳೂ' ಅಂತ ಅದಿಕ್ಕೆ ಅಪ್ಪಣ್ಣ ಹೆಂಡ್ತಿ ಮಾಡಿ ಡಬ್ಬಿ ತುಂಬಿಸಿಕೊಟ್ಟಿದ್ದ ಉಪ್ಪಿಟ್ಟನ್ನು ಗಬಕ್ಕಂತ ಬಾಯಿಗೆ ಹಾಕ್ಕೊಂಡು ಅಗಿದು ನುಂಗಿ ''ಅದೇನು ಘನಂದಾರಿ ವರಸೆ ಅಲ್ಲಯ್ಯ, ನಾವು ಜೀವನದಲ್ಲಿ ಸುಖಕ್ಕೆ, ಸಂತೋಷಕ್ಕೆ, ನೆಮ್ಮದಿಗೆ ದಾರಿ ಕಂಡ್ಕೊಳೋಲ್ವೆ ಹಾಗೆ ಬಂದಿರೋ ಕೋಪ ಉಪಶಮನಗೊಳಿಸಿಕೊಳ್ಳೋಕೆ ಇದೊಂದು ದಾರಿ'' ಅಂದ. ಆದರೆ ಅದು ಯಾರಿಗೂ ಅರ್ಥವಾಗ್ಲಿಲ್ಲ. ಕೊನೆಗೆ ಅಪ್ಪಣ್ಣನೇ ದೀರ್ಘವಾದ ವಿವರಣೆ ನೀಡಬೇಕಾಗಿ ಬಂತು. ''ನೋಡ್ರಯ್ಯ ಇದು ಸಿಂಪಲ್ಲು. ಅಬ್ರಿವೇಟೆಡ್ ಫಾರಮ್ ಆಫ್ ಬೈಯಿಂಗ್. ಈಗ ನೀನು ಬಾಸ್‌ನ ಬೈಬೇಕು ಆದ್ರೆ ಬೈಯೋಕೆ ಆಗಲ್ಲ. ಆಗೆಲ್ಲ ಇವು ಸಹಾಯಕ್ಕೆ ಬರುತ್ತೆ. ಹೇಗೆ ಗೊತ್ತ. ಆವತ್ತು ನಾನು KNM ಅಂದ್ನಲ್ಲ. ಹಾಗಂದ್ರೆ ಕಥಡಾ ನನ ಮಗ ಅಂತ. ಇದಕ್ಕೆ ಕಂತ್ರಿ ನನ ಮಗ, ಕುರುಡ ನನ ಮಗ ಅಂತಾನೂ ಸೇರಿಸ್ಕೋಬಹುದು. LNM ಅಂದ್ರೆ ಲೂಸ್ ನನ ಮಗ, ಲುಚ್ಚ ನನ ಮಗ, ಹೀಗೆ.'' ಇನ್ನೂ ಏನೇನು ಹೇಳ್ತಾ ಇದ್ನೋ ಏನೋ ಅಷ್ಟರಲ್ಲಿ ಬಾಸ್ ಬಂದ್ರು. ಅಪ್ಪಣ್ಣ ಸುಮ್ನಾದ. ಆದರೆ ಅಪ್ಪಣ್ಣ ಹೇಳಿದ್ನಲ್ಲ ಡೈರೀಲಿ ಬರ್ಕೊಂಡಿದಾರೆ. ಆವಾಗಾವಾಗ ಅವರೂ ಪ್ರಯತ್ನಿಸ್ತಿರ್‍ತಾರೆ. ಅವರು ಬರ್ಕೊಂಡಿರೋದು ಏನೂಂತ ಕೆಲವು ಸ್ಯಾಂಪಲ್ಲು ನಿಮಗೂ ಹೇಳ್ಲಾ.

| | | |
|---|---|---|
| DM | = | ದಡ್ಡ ಮುಂಡೇದು, ದರಿದ್ರ ಮುಂಡೇದು |
| PNM | = | ಪಾಪಿ ನನ ಮಗ, ಪರದೇಶಿ ನನ ಮಗ ಇತ್ಯಾದಿ |
| DNS | = | ದೊಣ್ಣೆ ನಾಯ್ಕನ ಸಹವಾಸ |
| HNM | = | ಹಲ್ಕಾ ನನ ಮಗ |
| BM | = | ಬಡ್ಡೀಮಗ |

ಅಯ್ಯೋ ಇನ್ನೂ ತುಂಬಾ ಇದೆ. ಅಪ್ಪಣ್ಣ ಒಂದು ಡೈರೆಕ್ಟರೀನೆ ತರಬೇಕೂಂತಿದ್ದಾನೆ. ಬೇಕಾದ್ರೆ xxx ಕೊಂಡ್ಕೋತಾರಂತೆ. ಇವತ್ತಿಗೆ ಇಷ್ಟು ಸಾಕು.

ಬರ್‍ಲಾ,

# ಹೆಂಡದ ಹೊಳೆ

– ಎಂ.ಎಸ್.ಕೆ.

ಯುದ್ಧ ಮುಗಿದ ಮೇಲೆ ಅರ್ಜುನನ ಜಂಭಾ ತಡೀಲಾರದೆ ಪರಮಾತ್ಮ ಉಪಾಯದಿಂದ ಅವನನ್ನು ಕುರುಕ್ಷೇತ್ರ ರಣಭೂಮಿಯ ಪತ್ತಿರ ಕರೆದುಕೊಂಡು ಹೋದ. ಅಲ್ಲಿ ಒಂದು ರಣ ಹದ್ದುಗಳ ಗುಂಪು ಕೂತಿತ್ತು. ಮಧುಸೂಧನ ಅವನ್ನ ''ಇಲ್ಲೇನ್ಮಾಡ್ತಾಯಿದೀರಾ'' ಅಂತ ಕೇಳಿದ್ನಂತೆ, ಅವು ''ಮುರಾಂತಕ, ನಾವು ಸರಿಯಾಗಿ ಊಟ ಮಾಡಿ ಸುಮಾರು ದಿನಾ ಆಯ್ತು, ನೀನು ರಾಮಾವತಾರದಲ್ಲಿ ರಾಕ್ಷಸರ ರಕ್ತ-ಮಾಂಸದ ಹೊಳೇನೇ ಹರಿಸಿಬಿಟ್ಟೆ, ನಂಬಿದರೆ ನಂಬು ಬಿಟ್ಟರೆ ಬಿಡು, ನಾವು ಅಧೆ ಕೊನೇ ಸಲ ಕಂಠಪೂರ್ತಿ ದಿನಗಟ್ಟಲೆ ಉಂಟಿದ್ದು, ಆಮೇಲೆ ಆ ಥರ ಊಟಾನೇ ಸಿಕ್ಕಿಲ್ಲ ನಮಗೆ. ಈಗ ತುಂಬಾ ಹಸಿವಾಗಿದೆ. ಇಲ್ಲೇನೋ ಮಹಾಭಾರತ ಯುದ್ಧ ಆಗುತ್ತೆ ಆವಾಗ ಮತ್ತೆ ಮಾಂಸ ರಕ್ತಗಳ ಹೊಳೆ ಹರಿಯುತ್ತೆ ಅಂತ ಜನ ಮಾತಾಡಿಕೋತಿದ್ರು. ಸರಿಯಾದ ಊಟಾ ಸಿಗಬೋದೇನೋ ಅಂತ ಆಸೆ ಪಟ್ಕೊಂಡು ಇಲ್ಲಿ ಬಂದ್ವಿ, ಕಾಯ್ತಿದೀವಿ. ಯುದ್ಧ ಆಗೋ ಸೂಚನೇನೆ ಇಲ್ಲ, ಮಾಂಸ ರಕ್ತದ ಹೊಳೆ ಇಲ್ವೇ ಇಲ್ಲ. ಪರಂತಪ, ನೀನಾದ್ರೂ ಹೇಳು. ಈ ಯುದ್ಧ ಯಾವಾಗ ಶುರು ಆಗುತ್ತೇಂತ ಅಂತ ಅನ್ನೋಣ, ಆ ಭಕ್ತವತ್ಸಲ ಹೇಳಿದ್ನಂತೆ ''ಅಯ್ಯೋ ಬೆಪ್ಪುಗಳಾ ಆ ಯುದ್ಧ ಆಗಿ ಎಷ್ಟು ದಿನಾ ಆಯ್ತು, ಎಣ್ಣೆ ಬಂದಾಗ ಕಣ್ಣು ಮುಚ್ಚಿಕೊಂಡ್ರು ಅನ್ನೋ ಥರ ನೀವೆಲ್ಲೋ ನಿದ್ದೆ ಮಾಡಿರ್ಬೇಕು ಆ ರಕ್ತ - ಮಾಂಸಗಳ ಹೊಳೆ ಹರಿತಿದ್ದಾಗ. ಇದನ್ನ ಕೇಳಿ ಅವಕ್ಕೆ ತಮ್ಮ ಚುರ್ ಅನ್ನೋ ಹೊಟ್ಟೇಗೆ ಇನ್ನಷ್ಟು ಅಚ್ಚ ಮೆಣಸಿನಪುಡಿ ಗೊಜ್ಜು ಸುರಿದಂತಾಗಿ ಅವು ಕೋಪದಿಂದ ''ಮುರಾರಿ, ನಮ್ಮನ್ನ ಸುಮ್ಮನೆ ರೇಗಿಸಬೇಡ. ನಾವೆಲ್ಲಾ ಹಸಿವಿನಿಂದ ನಿದ್ದಿ ಬರದೆ ಎಚ್ಚರವಾಗೇ ಇದ್ವಿ, ರಕ್ತದ ಹೊಳೇನೂ ಇಲ್ಲ, ಪಳೇನೂ ಇಲ್ಲ. ನಡೆದಿದ್ದು ಯುದ್ಧವಲ್ಲ. ಯಾವುದೋ ಬೀದೀ ಜಗಳ ಇರ್ಬೇಕು'' ಅನ್ಕೊಂಡು ದವಡೇಲಿ ನೀರು ಹಾಕ್ಕೋಂಡು ಹಾರಿಹೋದ್ವಂತೆ... ಅರ್ಜುನ ಮರುಮಾತಿಲ್ಲದೆ ಮನೆಗೆ ವಾಪಸ್ ಹೋದ. ಶ್ರೀ ಕ್ರಿಷ್ಣ ಮುಸಿ ಮುಸಿ ನಕ್ಕ. ಇದು ಯಾಕ್ ಹೇಳೋಕ್ ಬಂದೆ ಅಂದ್ರೆ ಬೆಂಗಳೂರ್ ಹತ್ತಿರ ಎಲ್ಲೋ ಹೆಂಡದ ಲಾರಿ ಮುಗುಚಿಕೊಂಡು ಹೆಂಡ ಬೀದೀಲಿ ಹೊಳೇ ತರ ಹರೀತಂತೆ. ಅಲ್ಲಿನ ಜನ ಕಂಠಪೂರ್ತಿ ಕುಡಿಯೋದಲ್ದೆ ಕೈಗೆ ಸಿಕ್ಕಿದ ಪಾತ್ರೆಗಳಲ್ಲಿ ಹೆಂಡಾನ ಹಿಡ್ಕೊಂಡು ಹೋದ್ರಂತೆ. ಅಲ್ಲಿನ ಬೀದೀ ನಾಯಿಗಳು, ಮರದ ಮೇಲಿನ ಕೋತೀಗಳು, ಹಸು ಕರು ಗೂಳಿಗಳು ಚೆನ್ನಾಗೇ ಎನ್ಜಾಯ್ ಮಾಡಿರಬೇಕು ಈ ಬಿಟ್ಟೀ ಬೂಜ್ನ.

ನಮ್ಮನೆ ಹತ್ತಿರ ಇದ್ದ ರಾಮ ಮಂದಿರದಲ್ಲಿ ಆವಾಗಾವಾಗ ಪುರಾಣ ಹೇಳಿಸ್ತಿದ್ರು. ಅಲ್ಲುರಾಣ ಹೇಳೋರು ರಾಮ ರಾಜ್ಯದ ವರ್ಣನೆ ಮಾಡ್ತಾ ರಾಮ ರಾಜ್ಯ ಅಂದರೆ ಬೀದೀಲಿ ಹಾಲು, ಮೊಸರು, ತುಪ್ಪ, ಜೇನುತುಪ್ಪ ಹರೀತಿರತೆ. ನಮಗೆ ಬೇಕಾದಾಗ ಅದನ್ನ ಪಾತ್ರೇಲಿ ತುಂಬಿಕೊಂಡು ಬಂದು ಅದಕ್ಕೆ ಬಾಳೇಹಣ್ಣು, ದ್ರಾಕ್ಷಿ, ಗೋಡಂಬಿ, ಯಾಲಕ್ಕಿ, ಸಕ್ಕರೆ ಹಾಕಿ ಪಂಚಾರಿಮೃತ ಮಾಡ್ಕೊಂಡು ಕುಡೀಬೋದೂಂತ ಹೇಳಿದ್ರು. ಈ ಪಂಚಾಮೃತ ದೇವರ ನೈವೇದ್ಯಕ್ಕೆ ಬರುತ್ತೋ ಇಲ್ವೋ ಅವರು ಹೇಳ್ಲಿಲ್ಲ ಯಾರೂ ಅವರನ್ನ ಕೇಳ್ಲಿಲ್ಲ.


ಅದೇ ರಾವಣ ರಾಜ್ಯದಲ್ಲಿ ಹರೀತಿದ್ದದು ನಮ್ಮ ಹದ್ದು ಹೇಳ್ದಾಗೆ ಹೆಂಡ, ರಕ್ತ, ಮಾಂಸ, ಅಂದರೆ ನಾವೀಗಿರೋದು ರಾಮರಾಜ್ಯವೂ ಅಲ್ಲ, ಭೀಮರಾಜ್ಯವೂ ಅಲ್ಲ, ರಾವಣರಾಜ್ಯವೂ ಅಲ್ಲ, ಇದು ಎಲೆಕ್ಷನ್ ರಾಜ್ಯ. ಈ ಎಲೆಕ್ಷನ್ ರಾಜ್ಯದಾಗೆ ನಡೆಯೋದೆ ಬರೀ ಎಲೆಕ್ಷನ್ನೇ. ಲೋಕ ಸಭೆ, ಅಸೆಂಬ್ಲಿ, ಜಿಲ್ಲಾ ಪರಿಷತ್, ತಾಲ್ಲೂಕ್ ಪರಿಷತ್, ಗ್ರಾಮ ಪಂಚಾಯತ್, ಆ ಕಾನ್ಸ್ಟಿಟ್ಯೂಯೆನ್ಸಿ, ಈ ಕಾನ್ಸ್ಟಿಟ್ಯೂಯೆನ್ಸಿ ಒಂದೇ ಎರಡೆ. ವರ್ಷಪೂರ್ತಿ ಎಲೆಕ್ಷನ್ನೆ. ಇದರ ಜೊತೆಗೆ ಸ್ಕೂಲು, ಕಾಲೇಜು, ಸೊಸೈಟಿಗಳು ಈ ಎಲೆಕ್ಷನ್ ಬೇರೆ.

ಈ ಎಲೆಕ್ಷನ್ನಾಗೆ, ಎಲೆಕ್ಷನ್ ಕಮೀಷನ್ನೋರು ಇಲ್ಲದ ಪಿರಿಪಿರಿ ಮಾಡ್ತಾರೆ. ಪಂಚೆ - ಸೀರೇ ಕೊಡೋಹಾಗಿಲ್ಲ, ಹೆಂಡದ ಆರವಟ್ಟಿಗೆ ಇಡೋ ಹಾಗಿಲ್ಲ ದುಡ್ಡಂತೂ ಮುಟ್ಟೋ ಹಾಗೇ ಇಲ್ಲ. ಇಲ್ಲದ ಪಿರಿಪಿರಿ ಅವರ್ದು. ಇನ್ನು ನಮಗೆ ಓಟು ಬೀಳೋದ್ ಹ್ಯಾಗೇಂತ ಒದ್ದಾಡ್ತಿದಾರೆ ನಮ್ಮ ಪುಡಾರಿಗಳು.

ಈ ಹೆಂಡದ ಲಾರೀ ಬಿದ್ದಿದ್ದು ಇವರಿಗೆಲ್ಲ ಒಳ್ಳೆ ಐಡಿಯಾ ಕೊಟ್ಟಿರಬೇಕು, ಉರೇಕಾ ಥರ. ''ನೋಡ್ರಪಾ ಇಂಥ ದಿನ ರಾತ್ರಿ, ಇಷ್ಟು ಹೊತ್ತಿಗೆ ಇಂಥಾ ಜಾಗದಲ್ಲಿ ಒಂದು ಹೆಂಡದ ಮೆಟಡಾರ್ ಉರುಳಿ ಬೀಳುತ್ತೆ, ನೀವೆಲ್ಲ ಅಲ್ಲಿ ನಿಮ್ಮ ಪಾತ್ರೆ ಪಡಗು ಹಿಡ್ಕೊಂಡು ರೆಡಿಯಾಗಿ ನಿಂತಿರಿ, ಪೋಲೀಸ್ ನೋರು ಬರೋದ್ರೊಳ್ಗೆ ಅಲ್ಲಿರೋ ಹೆಂಡಾ ಖಾಲೀ ಆಗಿರ್ಬೇಕು'' ಅಂತ ಅಲ್ಲಿರೋ ತಮ್ಮ ಓಟುದಾರರಿಗೆ ಮುಂಚೇನೆ ತಿಳಿಸಿದ್ರೆ ಹೇಗಿರುತ್ತೆ ನೋಡಿ, ವ್ರತಾನೂ ಉಳಿತು, ಓಟೂ ಸಿಕ್ಕಿತು. ಹೇಗಿದೆ ಐಡಿಯಾ.

ಒಬ್ಬ ಕ್ಯಾನ್ಡಿಡೇಟ್ದು ಎರಡು ಲಾರೀ ಲೋಡು ಹೆಂಡ ಹೀಗೆ ಅದೇ ಕಾನ್ಸ್ಟಿಟ್ಯು ಎನ್ಸೀಲಿ ಮುಗುಚಿಕೊಂಡ್ರೆ, ಅವನ ಪ್ರತಿವಾದಿ ಸುಮ್ಮನಿರ್ತಾನ? ''ಓಹೋ ಎಲಾ ಇವನ, ಹೀಗಾ ಇವನ್ ಸಮಾಚಾರ? ಒಂದು ಬೀದೀಗೆ ಒಂದು ಲಾರಿ ಬೀಳಿಸ್ತಾನ? ಇರ್ಲಿ, ನಾನೂ ಒಂದು ಕೈ ನೋಡ್‌ಕೊಂಡೇಬಿಡ್ತೀನಿ. ನೋಡ್ರಪ್ಪಾ, ಆ ಪಾರ್ಟ್ಟೀ ಹೇಳೋಹಾಗೆ ನೀವೆಲ್ಲಾ ಒಳ್ಳೇ ಭಿಕ್ಷದೋರ್ ಥರ ಪಾತ್ರ, ಪಡಗು

ಹಿಡ್‌ಕೊಂಡು ಬೀದೀಲಿ ನಿಂತ್ಕೋಬೇಕಾಗಿಲ್ಲ. ನಾನು ನಿಮ್ಮ ಬೀದೀಲಿ ನನ್ನ ಲಾರೀ ಬೀಸ್ದಾಗ ಅದರಲ್ಲಿರೋ ಹೆಂಡದ ಡ್ರಮ್ಮುಗಳು ಉರುಳಿಕೊಂಡು ಸೀದಾ ನಿಮ್ಮ ಮನೆ ಬಾಗಿಲಿಗೇ ಬಂದು ಬೀಳುತ್ತೆ. ನೀವು ಪಾತ್ರೆ, ಪಡಗು, ಬಾಂಡ್ಲೆ, ಬೀದಿಗೆ ತರೋದೇ ಬೇಡ, ಸುಮ್ಮನೆ ನಿಮ್ಮ ಮನೆ ಬಾಗಿಲ್ನಾ ತೆರೆದು ಆ ಡ್ರಂನ ಮನೆ ಒಳಗೆ ಕರ್ಕೊಳ್ಳಿ,'' ಅಂದೇ ಅಂತಾನೆ. ಈ ಥರ ಭಾಗ್ಯಾದ ಡ್ರಂ ಮನೇಬಾಗಿಲಿಗೇ ಉರುಳಿಕೊಂಡ್ ಬಂದಾಗ ಯಾರ್ ಬೇಡಾಂತಾರೆ ನೀವೇ ಹೇಳಿ. ಬಿಟ್ಟೀ ಮನೇಬಾಗಿಲಿಗೇ ಬಂದ ಡ್ರಂನ ತಳಮಟ್ಟ ಕುಡಿದು ಮುಗಿಸಿದ್ಮೇಲೆ, ಓಟು ಕೊಡಕ್ಕಾಗಲ್ಲಾ ಅನ್ನಕಾಯ್ತದಾ? ಅದು ನಿಯತ್ತಾ?



# ಕಣ್ಣೀರು ವ್ಯರ್ಥವಾಗಲಿಲ್ಲ!

– ರಾಮಿ

ಬದುಕಿನಲ್ಲಿ ಕಣ್ಣೀರು ಬರಿಸುವ ಸಂದರ್ಭಗಳು ಕೆಲವಾದರೂ ಇವೆ. ಸಾವು ಅಗಲುವಿಕೆಗಳ ಮೊದಲಾದ ಸಂಕಷ್ಟಗಳಿಂದ ತೊಡಗಿ ಮ್ಯಾಚ್ ಫಿಕ್ಸಿಂಗ್ ತಕಲೀಪುಗಳ ವರೆಗೆ ನಾನಾ ಕಾರಣಗಳಿಂದ ಕಣ್ಣೀರು ಬಂದುಬಿಡುತ್ತೆ. ಅಲ್ಲದೆ ಕಣ್ಣೀರಿನ ಪರಿಣಾಮ ಕೂಡ ಬೇರೆ ಬೇರೆ ಸಂದರ್ಭಗಳಲ್ಲಿ ಬೇರೆ ಬೇರೆ ತರಹ ಇರೋದು ಸಾಧ್ಯ.

ಕಣ್ಣೀರು ಬರಿಸುವ ಬಾಬತ್ತುಗಳಲ್ಲಿ ಹಲ್ಲುನೋವು ಕೂಡ ಒಂದು ಎಂಬ ಅನುಭವ ಎಲ್ಲರಿಗೂ ಆಗಿರಬೇಕು. ಎಂಥಂಥಾ ಫಿಲಾಸಫರುಗಳಿಗೂ ಹಲ್ಲುನೋವನ್ನು ತಾಳಿಕೊಳ್ಳುವುದು ಕಷ್ಟವಂತೆ. ಮೊನ್ನೆ ನನಗೂ ಹಾಗಾಯಿತು ಕಣ್ಣೀರೇ ಬಂತು ಕಣ್ಣೀರಿನ ಪರಿಣಾಮ ಮಾತ್ರ ತೀರ ಕೆಟ್ಟದಾಗಿರಲಿಲ್ಲ.

ಕೋದಂಡುವಿನ ಮನೆಯಲ್ಲಿ ನೀಡಿದ ಆ ಕೋಡುಬಳೆಗಳನ್ನು ಯಾಕಾರ ಕಟುಂ ಅಂತ ಅಗಿದೆನೊ! ಕೂಡಲೆ ದವಡೆಯಲ್ಲಿ ಕೊಟ್ಟಣ ಕುಟ್ಟಲು ಆರಂಭ. ಮಾರನೆ ದಿನ ಭಾನುವಾರ ಬೆಳಗ್ಗೆ ಬೆಂಗಳೂರಿಂದ ಬಂದ ಮಿತ್ರನ ಭಾಷಣ ಹೋಗದೆ ನಿರ್ವಾಹವಿಲ್ಲ. ಹಲ್ಲು ನೋವೆಂದು ತಪ್ಪಿಸಿಕೊಳ್ಳಲುಂಟೆ!

ಭಾಷಣಕಾರ ಮಿತ್ರನೊ ಕಂಡದ್ದನ್ನು ಕಂಡ ಹಾಗೆ ಹೇಳುವುದರಲ್ಲಿ ನಿಸ್ಸೀಮ. ಭಾಷಣದಿಂದ ಆಗೋದು ಹೋಗೋದು ಏನೇ ಇರಲಿ ಕೇಳುಕ್ಕೆ ಚೆನ್ನಾಗಿರುತ್ತೆ ಅಂತ ನಡೆದೇಬಿಟ್ಟೆ, ಹಲ್ಲು ನೋವನ್ನು ಲೆಕ್ಕಿಸದೆ.

ಅಲ್ಲಿ ಹೊಕ್ಕುವಾಗಲೇ ಕಾಪಿ ತಿಂಡಿ ಸರಬರಾಜು ಬಿಸಿ ಬಿಸಿ ಆಂಬೊಡೆ ಘಮ ಘಮಿಸುವ ಬಿಸಿ ಬಿಸಿ ಕಾಫಿ ಬೇಡ ಬೇಡ ಎನ್ನುತ್ತಲೇ ಸ್ವೀಕರಿಸಿದೆ. ಸರಿ ಮತ್ತೆ ದವಡೆಯಲ್ಲಿ ಕೊಟ್ಟಣ ಕುಟ್ಟುಕ್ಕೆ ಶುರು.


ಸಭಾಂಗಣ ಸೇರಿ ಸೀಟು ಹಿಡಿದು ಕಣ್ಣು ಮುಚ್ಚಿಕೊಂಡು ಭಾಷಣ ಕೇಳಲು ಅಣಿಯಾದೆ ಸಭೆಯಲ್ಲಿ ಕಣ್ಣು ಮುಚ್ಚಿಕೊಂಡರೆ ತೂಕರಿಸಿದರೆ ಸದ್ಯ ಯಾರದೂ ಆಕ್ಷೇಪವಿರಲಾರದು ಯಾಕೆಂದರೆ ಪಾರ್ಲಿಮಂಟಿನಲ್ಲಿ ಕೂಡ ಯೋಗ ನಿದ್ರೆಗೆ ನಿಷೇಧವಿಲ್ಲವಲ್ಲ ಪ್ರಾರ್ಥನೆ ಮಾಲಾರ್ಪಣೆ, ಪರಿಚಯ ಸ್ವಾಗತ

ಇನ್ನೊಂದು ಮತ್ತೊಂದು ಮತ್ತೆ ಭಾಷಣ. ಇತ್ತೀಚೆಗೆ ಅಗಲಿದ ಸ್ಥಳೀಯ ವಿದ್ವಾಂಸರೊಬ್ಬರ ಬಗ್ಗೆ ಮಿತ್ರ ತುಂಬ ಕಳಕಳಿಯಿಂದ ಮಾತಾಡಿದ. ನನ್ನ ಹಲ್ಲು ನೋವು ಕ್ಷಣಕ್ಷಣಕ್ಕೆ ಹೆಚ್ಚುತ್ತಲೇ ಇತ್ತು.

ಅಮ್ಮಮ್ಮ! ಕೊನೆಗೂ ಭಾಷಣ ಮುಗಿಯಿತು. ಮಿತ್ರನನ್ನು ಮಾತಾಡಿಸಿ ಅಮೋಘ ಭಾಷಣಕ್ಕಾಗಿ ಅಭಿನಂದಿಸಿದೆ. ಮಿತ್ರ ನನ್ನ ಎರಡೂ ಕೈಗಳನ್ನು ಹಿಡಿದುಕೊಂಡು ಧನ್ಯತಾಭಾವದಿಂದ "ನಿನ್ನ ಕಣ್ಣು ಹನಿಗೂಡಿದ್ದನ್ನು ಕಂಡೆ" ಎಂದು ಬೀಳ್ಕೊಟ್ಟ.

ಹನಿಗೂಡಿದ್ದೇನು, ಕಣ್ಣೀರು ಇಳಿದಿರಲಿಕ್ಕೂ ಸಾಕು ಅಷ್ಟೊಂದು ವೇದನೆ ನೋವಿನ ಕಣ್ಣೀರಾದರೂ ತೀರ ವ್ಯರ್ಥವಾಗಲಿಲ್ಲ ಎಂಬ ವಿಚಿತ್ರ ಸಮಾಧಾನದಿಂದ ನಗೆ ಬಾರದಿರಲಿಲ್ಲ!


ಅಲ್ಲಿಂದ ನೇರ ಡಾ|| ದಂಡಯ್ಯನ ಕ್ಲಿನಿಕ್ಕಿಗೆ ದೌಡಾಯಿಸಿದೆ ಹಲ್ಲು ಕೀಳಿಸುಕ್ಕೆ!






ಗ್ರಾನೈಟ್ ಮಂತ್ರೀಂತ ಮಾಡಿದ್ರೆ
ಸರಂಡರ್ ಆಗ್ತಾನಂತೋ?

# ಸುಂದರ ಮುಖಗಳು. ಸುಂದರ ಕ್ಷಣಗಳು.




[illegible] ಸಂಪ್ರದಾಯದಿಂದ ಧರಿಸಲ್ಪಡುವ ಹಾಗೂ ಉಡುಗೊರೆಯಾಗಿ [illegible] ಗಡಿಯಾರಗಳು. ಸದಾ ನಿಮಗೆ ಅತ್ಯುತ್ಕೃಷ್ಟ ಸಮಯ ನೀಡುವ ಹಾಗೂ ಸಮಯಪಾಲನೆಯಲ್ಲಿ ಭಾರತದ ಮುಂದಾಳತ್ವವನ್ನು ಸೂಚಿಸುವ ಗಡಿಯಾರಗಳು. [illegible]ಕ್ಕೂ ಹೆಚ್ಚಿನ ಮಾಡಲ್‌ಗಳಲ್ಲಿ ರೂ. 350/-ರಿಂದ ರೂ. 8,500/- ರವರೆಗಿನ ಬೆಲೆಗಳಲ್ಲಿ. ಇಂದೇ ನಿಮ್ಮ ಹತ್ತಿರದ ಎಚ್‌ಎಮ್‌ಟಿ ಷೋರೂಮ್‌ಗೆ ಭೇಟಿ ನೀಡಿ. ನಿಮ್ಮ ನೆಚ್ಚಿನ ಗಡಿಯಾರವನ್ನು ಆಯ್ಕೆ ಮಾಡಿರಿ. ಇದು ನಿಜವಾಗಿಯೂ ನಿಮ್ಮ ಹಣಕ್ಕೆ ತಕ್ಕ ಅತ್ಯುತ್ಕೃಷ್ಟ ಸಮಯ!

ಅಸಲಿ ಎಚ್‌ಎಮ್‌ಟಿ ಗಡಿಯಾರಗಳನ್ನು ಅಧಿಕೃತ ಮಾರಾಟ ಮಳಿಗೆಯಿಂದ ಕೊಳ್ಳಿರಿ.
[illegible] ಹಾಗೂ ಗ್ಯಾರಂಟಿ ಕಾರ್ಡ್ ಕೇಳಿ ಪಡೆಯಿರಿ

hmt ಗಡಿಯಾರಗಳು

ರಾಷ್ಟ್ರದ ಸಮಯಪಾಲಕರು

MASS HMT 2188-00